# ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1961

## ಪ್ರಕರಣಗಳ ಅನುಕ್ರಮಣಿಕೆ


ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಪ್ರಕರಣಗಳು

**ಪ್ರಾರಂಭಿಕ**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.
2. ಪರಿಭಾಷೆಗಳು

**ಸಂರಕ್ಷಿತ ಸ್ಮಾರಕಗಳು**

3. ಸಂರಕ್ಷಿತ ಸ್ಮಾರಕಗಳು ಮತ್ತು ಪ್ರದೇಶಗಳು ಎಂಬುದಾಗಿ ಭಾವಿಸಲಾದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳು.
4. ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿತ ಸ್ಮಾರಕಗಳಾಗಿರುವುದಾಗಿ ಘೋಷಿಸಲು ಸರ್ಕಾರದ ಅಧಿಕಾರ.
5. ಸಂರಕ್ಷಿತ ಸ್ಮಾರಕದಲ್ಲಿನ ಹಕ್ಕುಗಳ ಆರ್ಜನೆ.
6. ಒಪ್ಪಂದದ ಮೂಲಕ ಸಂರಕ್ಷಿತ ಸ್ಮಾರಕದ ಪರಿರಕ್ಷಣೆ.
7. ಅಸಮರ್ಥತೆಯಲ್ಲಿರುವ ಅಥವಾ ಸ್ವಾಧೀನದಲ್ಲಿಲ್ಲದ ಒಡೆಯರು.
8. ಸಂರಕ್ಷಿತ ಸ್ಮಾರಕವನ್ನು ದುರಸ್ತಿ ಮಾಡಲು ದತ್ತಿಯ ವಿನಿಯೋಗ.
9. ಒಪ್ಪಂದವನ್ನು ಮಾಡಿಕೊಳ್ಳಲು ತಪ್ಪುವುದು ಅಥವಾ ನಿರಾಕರಿಸುವುದು.
10. 5ನೇ ಪ್ರಕರಣದ ಮೇರೆಗಿನ ಒಪ್ಪಂದದ ಉಲ್ಲಂಘನೆಯನ್ನು ನಿಷೇಧಿಸುವ ಆದೇಶವನ್ನು ಮಾಡುವ ಅಧಿಕಾರ.
11. ಒಪ್ಪಂದಗಳ ಜಾರಿ.
12. ಕೆಲವು ಮಾರಾಟಗಳಲ್ಲಿ ಖರೀದಿದಾರರು ಮತ್ತ ಒಡೆಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳು ಒಡೆಯನು ಬರೆದುಕೊಟ್ಟ ಲಿಖಿತಕ್ಕೆ ಬದ್ಧರಾಗಿರತಕ್ಕದ್ದು.
13. ಸಂರಕ್ಷಿತ ಸ್ಮಾರಕದ ಆರ್ಜನೆ.
14. ಕೆಲವು ಸಂರಕ್ಷಿತ ಸ್ಮಾರಕಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದು.
15. ಸ್ವಯಿಚ್ಛೆಯ ವಂತಿಕೆಗಳು.
16. ಆರಾಧನಾ ಸ್ಥಳವನ್ನು ದುರುಪಯೋಗಪಡಿಸಿಕೊಳ್ಳುವುದು, ಮಲಿನಗೊಳಿಸುವುದು ಅಥವಾ ಅಪವಿತ್ರಗೊಳಿಸುವುದರಿಂದ ಸಂರಕ್ಷಣೆ.
17. ಸ್ಮಾರಕದಲ್ಲಿ ಸರ್ಕಾರಿ ಹಕ್ಕುಗಳನ್ನು ಬಿಟ್ಟುಕೊಡುವುದು.
18. ಸಂರಕ್ಷಿತ ಸ್ಮಾರಕಗಳಿಗೆ ಪ್ರವೇಶದ ಹಕ್ಕು.

**ಸಂರಕ್ಷಿತ ಪ್ರದೇಶಗಳು**

19. ಪುರಾತತ್ವ ಸ್ಥಳ ಮತ್ತು ಅವಶೇಷಗಳನ್ನು ಸಂರಕ್ಷಿತ ಪ್ರದೇಶವಾಗಿರುವುದಾಗಿ ಘೋಷಿಸಲು ಸರ್ಕಾರದ ಅಧಿಕಾರ.
20. ಸಂರಕ್ಷಿತ ಪ್ರದೇಶಗಳಲ್ಲಿ ಸ್ವತ್ತಿನ ಹಕ್ಕುಗಳನ್ನು ಅನುಭೋಗಿಸುವುದರ ಮೇಲೆ ಪರಿಬಂಧಗಳು.
21. ಸಂರಕ್ಷಿತ ಪ್ರದೇಶವನ್ನು ಆರ್ಜಿಸಲು ಅಧಿಕಾರ.

**ಪುರಾತನ ವಸ್ತುಗಳ ಸಂರಕ್ಷಣೆ**

22. ಪುರಾತನ ವಸ್ತುಗಳ ಸ್ಥಳ ಬದಲಾಯಿಸುವಿಕೆಯನ್ನು ನಿಯಂತ್ರಿಸಲು ಸರ್ಕಾರದ ಅಧಿಕಾರ.
23. ಸರ್ಕಾರದಿಂದ ಪುರಾತನ ವಸ್ತುಗಳ ಖರೀದಿ.

**ನಷ್ಟ ಪರಿಹಾರದ ತತ್ವಗಳು**

24. ನಷ್ಟ ಅಥವಾ ಹಾನಿಗಾಗಿ ನಷ್ಟ ಪರಿಹಾರ.
25. ಮಾರುಕಟ್ಟೆ ಮೌಲ್ಯ ಅಥವಾ ನಷ್ಟ ಪರಿಹಾರದ ನಿರ್ಧರಣೆ.

**ಸಂಕೀರ್ಣ**

26. ದಂಡಗಳು.
27. ಅಪರಾಧಗಳ ಅಧಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿ.
28. ಕೆಲವು ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.
29. ಸರ್ಕಾರಕ್ಕೆ ಬರಬೇಕಾದ ಮೊಬಲಗುಗಳನ್ನು ವಸೂಲು ಮಾಡುವುದು.
30. ಅಧಿನಿಯಮದ ಮೇರೆಗೆ ಕೈಗೊಳ್ಳಲಾದ ಕ್ರಮ ರಕ್ಷಣೆ.
31. ನಿಯಮ ರಚನಾಧಿಕಾರ.
32. ನಿರಸನ ಮತ್ತು ಉಳಿಸುವಿಕೆಗಳು.
33. ಅಧಿನಿಯಮವು ಕೇಂದ್ರ ಅಧಿನಿಯಮ 1958ರ 24ರ ಜೊತೆಗೆ ಇರತಕ್ಕದ್ದು ಆದರೆ ಅದನ್ನು ಅಲ್ಪೀಕರಿಸಿ ಅಲ್ಲ.

******

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**I**

**1962ರ ಅಧಿನಿಯಮ 7.-** ಹೊಸ ಮೈಸೂರು ರಾಜ್ಯದಲ್ಲಿ ಪ್ರಾಚೀನ ಸ್ಮಾರಕಗಳು ಇತ್ಯಾದಿಗಳ ಸಂರಕ್ಷಣೆ ಮತ್ತು ಪರಿರಕ್ಷಣೆಗೆ ಸಂಬಂಧಿಸಿದ ಮುಂದಿನ ಅಧಿನಿಯಮಗಳು ಜಾರಿಯಲ್ಲಿವೆ:-

(1) ಹೈದರಾಬಾದ್ ಪ್ರಾಚೀನ ಸ್ಮಾರಕಗಳ ಪರಿರಕ್ಷಣೆ ಅಧಿನಿಯಮ, 1337 ಎಫ್ (1337ರ ಹೈದರಾಬಾದ್ ಅಧಿನಿಯಮ VIII ಫಾಸ್ಲಿ) ಹೈದರಾಬಾದ್ ಪ್ರದೇಶದಲ್ಲಿ ಜಾರಿಯಲ್ಲಿದೆ;

(2) ಮೈಸೂರು ಪ್ರಾಚೀನ ಸ್ಮಾರಕಗಳ ಪರಿರಕ್ಷಣೆ ಅಧಿನಿಯಮ, 1925 (1925ರ ಮೈಸೂರು ಅಧಿನಿಯಮ IX) ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದೆ; ಮತ್ತು

(3) ಪ್ರಾಚೀನ ಸ್ಮಾರಕ ಸಂರಕ್ಷಣೆ ಅಧಿನಿಯಮ, 1904 (1904ರ ಕೇಂದ್ರ ಅಧಿನಿಯಮ VII) ಹೊಸ ಮೈಸೂರು ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಜಾರಿಯಲ್ಲಿದೆ.

ಭಾರತ ಸರ್ಕಾರವು, ಸ್ಮಾರಕಗಳನ್ನು ಸಂರಕ್ಷಿಸಲು ಮತ್ತು ಪರಿಕ್ಷೀಸಲು ಮೇಲೆ ಹೇಳಿದ ಕೇಂದ್ರ ಅಧಿನಿಯಮ ಉಪಬಂಧಗಳ ಅನುಕೂಲತೆಯನ್ನು ಪಡೆದುಕೊಳ್ಳದೇ, ವಿಷಯದ ಕುರಿತು ತಮ್ಮದೇ ಸ್ವಂತ ಕಾನೂನುಗಳನ್ನು ಅಧಿನಿಯಮಿಸುವಂತೆ ರಾಜ್ಯ ಸರ್ಕಾರಗಳಿಗೆ ಸಲಹೆ ನೀಡಿದೆ.

ಇತ್ತೀಚೆಗೆ, ಭಾರತ ಸರ್ಕಾರವು, ಭಾರತ ಸಂವಿಧಾನದ ಏಳನೇ ಅನುಸೂಚಿಯ ಕೇಂದ್ರ ಪಟ್ಟಿಯಲ್ಲಿ 67ನೇ ನಮೂದು ಮತ್ತು ಸಹವರ್ತಿ ಪಟ್ಟಿಯಲ್ಲಿ 40ನೇ ನಮೂದಿನ ಅಡಿಯಲ್ಲಿನ ವಿಷಯಗಳನ್ನು ಒಳಗೊಳ್ಳುವ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958ನ್ನು ಅಧಿನಿಯಮಿಸಿದೆ.

ಪ್ರಸ್ತುತ ವಿಧೇಯಕವು, ರಾಜ್ಯಪಟ್ಟಿಯಲ್ಲಿ 12ನೇ ನಮೂದಿನ ಅಡಿಯಲ್ಲಿ ಬರುವ ಪ್ರಾಚೀನ ಸ್ಮಾರಕಗಳು ಎಂದರೆ, ಸಂಸತ್ತು ರಾಷ್ಟ್ರೀಯ ಮಹತ್ವವೆಂದು ಮಾಡಿದ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಘೋಷಿಸಲಾದವುಗಳನ್ನು ಹೊರತುಪಡಿಸಿ, ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ಪರಿರಕ್ಷಣೆಗೆ ಸಂಬಂಧಿಸಿದ ಕಾನೂನುಗಳಲ್ಲಿ ಏಕರೂಪತೆಯನ್ನು ತರುವುದಾಗಿದೆ.

ವಿಧೇಯಕದ ಉಪಬಂಧಗಳು ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958ರ ಸಂವಾದಿ ಉಪಬಂಧಗಳಿಗೆ ಅನುಸಾರವಾಗಿದೆ.

(ಕಡತ ಸಂಖ್ಯೆ:ಲಾ 81 ಎಲ್‌ಜಿಎಸ್ 58ರಿಂದ ಪಡೆಯಲಾಗಿದೆ).

**II**

**2024ರ ತಿದ್ದುಪಡಿ ಅಧಿನಿಯಮ ಸಂಖ್ಯೆ:35** ಈ ಮುಂದಿನವುಗಳಿಗಾಗಿ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1963 (1964ರ ಕರ್ನಾಟಕ ಅಧಿನಿಯಮ4)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ,-

(1) ಕಂಪನಿ ಅಥವಾ ಫರ್ಮ್ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ (LLP) ಸಂಸ್ಥೆ ಅಥವಾ ಪಾಲುದಾರಿಕೆ ಫರ್ಮ್, ಆಸಕ್ತಿಯುಳ್ಳ ಸೊಸೈಟಿಗಳು ಅಥವಾ ಸಹಕಾರ ಸಂಘಗಳು, ಟ್ರಸ್ಟ್‌ಗಳು ಅಥವಾ ಸರ್ಕಾರೇತರ ಸಂಸ್ಥೆಗಳು ಅಥವಾ ಆಸಕ್ತಿಯುಳ್ಳ ವ್ಯಕ್ತಿಗಳನ್ನು ಸ್ಮಾರಕ ಮಿತ್ರರು ಪಟ್ಟಿಯಲ್ಲಿ ಸೇರಿಸುವುದಕ್ಕೆ ಅರ್ಹರಾಗಿಸುವುದು; ಮತ್ತು

(2) ಈ ಅಧಿನಿಯಮದ ಉಲ್ಲಂಘನೆಗಾಗಿ ದಂಡನೆ ಮತ್ತು ಶಿಕ್ಷೆಯನ್ನು ಪರಿಷ್ಕರಿಸುವುದು.

ಆದ್ದರಿಂದ ಈ ವಿಧೇಯಕ.

[2024ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 36 , ಕಡತ ಸಂಖ್ಯೆ:ಸಂವ್ಯಶಾಇ 48 ಶಾಸನ 2024]
[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 12ನೇ ನಮೂದನೆಯಡಿ ಬರುತ್ತದೆ.]
[ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ರಾಜ್ಯ ಪತ್ರಿಕೆ ಸಂಖ್ಯೆ:387, ದಿನಾಂಕ:12.08.2024 ರಲ್ಲಿ ಪ್ರಕಟಗೊಂಡಿದೆ]

## [1][ಕರ್ನಾಟಕ ಅಧಿನಿಯಮ][1] 1962ರ ಸಂಖ್ಯೆ 7

(1962ರ ಫೆಬ್ರುವರಿ ಹದಿನೈದನೇ ದಿನಾಂಕದಂದು [1][ಕರ್ನಾಟಕ ರಾಜ್ಯಪತ್ರದಲ್ಲಿ][1] ಮೊದಲು ಪ್ರಕಟಿಸಲಾಗಿದೆ.)

## [1][ಕರ್ನಾಟಕ][1] ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961

(1962ರ ಫೆಬ್ರುವರಿ ನಾಲ್ಕನೇ ದಿನಾಂಕದಂದು ರಾಷ್ಟ್ರಪತಿಯವರ ಅನುಮತಿಯನ್ನು ಪಡೆಯಲಾಗಿದೆ.)

(2024ರ 35ನೇ ಅಧಿನಿಯಮದಲ್ಲಿ ತಿದ್ದುಪಡಿಯಾದಂತೆ)

[1][ಕರ್ನಾಟಕ ರಾಜ್ಯದಲ್ಲಿ][1] ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಪರಿರಕ್ಷಣೆಗಾಗಿ ಮತ್ತು ಶಿಲ್ಪಗಳು, ಕೆತ್ತನೆಗಳು ಮತ್ತು ಇತರ ಅಂತಹುದೇ ವಸ್ತುಗಳ ಸಂರಕ್ಷಣೆಗಾಗಿ ಉಪಬಂಧಿಸುವ ಅಧಿನಿಯಮ,

ರಾಷ್ಟ್ರೀಯ ಮಹತ್ವದ್ದೆಂದು ಸಂಸತ್ತು ರಚಿಸಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಘೋಷಿತವಾದುವುಗಳನ್ನು ಹೊರತುಪಡಿಸಿ, [1][ಕರ್ನಾಟಕ ರಾಜ್ಯದಲ್ಲಿನ][1] ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಪರಿರಕ್ಷಣೆಗಾಗಿ ಮತ್ತು ಶಿಲ್ಪಗಳು, ಕೆತ್ತನೆಗಳು ಮತ್ತು ಇತರ ಅಂತಹುದೇ ವಸ್ತುಗಳ ಸಂರಕ್ಷಣೆಗಾಗಿ ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಹನ್ನೆರಡನೆ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಗಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 ಎಂದು ಕರೆಯತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

(2) ಇದು ಇಡಿ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಂದು][1] ಜಾರಿಗೆ ಬರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.
2. ಅಧಿನಿಯಮವು ಅಧಿಸೂಚನೆ ಸಂಖ್ಯೆ: ಇಡಿ 16 ಎಸ್‌ಎಆರ್ 64 ದಿನಾಂಕ:08.08.1966ರ ಮೂಲಕ 15.08.1966ರಿಂದ ಜಾರಿಗೆ ಬಂದಿದೆ.

**2. ಪರಿಭಾಷೆಗಳು._** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,_

(1) "ಪ್ರಾಚೀನ ಸ್ಮಾರಕ" ಎಂದರೆ ಐತಿಹಾಸಿಕ, ಪುರಾತತ್ವ ಅಥವಾ ಕಲಾತ್ಮಕ ಆಸ್ಥೆಯುಳ್ಳಂಥ ಮತ್ತು ಒಂದು ನೂರು ವರ್ಷಗಳಿಗಿಂತಲೂ ಕಡಿಮೆಯಿಲ್ಲದೆ ಅಸ್ತಿತ್ವದಲ್ಲಿರುವಂಥ ಯಾವುದೇ ರಚನೆ,

ನಿರ್ಮಿತಿ ಅಥವಾ ಸ್ಮಾರಕ ಅಥವಾ ಯಾವುದೇ ಸಮಾಧಿ ದಿಬ್ಬ ಅಥವಾ ಹೂಳುವ ಸ್ಥಳ ಅಥವಾ ಯಾವುದೇ ಗುಹೆ, ಶಿಲಾಶಿಲ್ಪ, ಶಾಸನ ಅಥವಾ ಏಕಶಿಲೆ ಮತ್ತು ಇದು,-

(i) ಪ್ರಾಚೀನ ಸ್ಮಾರಕದ ಅವಶೇಷಗಳು;

(ii) ಪ್ರಾಚೀನ ಸ್ಮಾರಕದ ಸ್ಥಳ;

(iii) ಬೇಲಿ ಹಾಕುವುದಕ್ಕೆ ಅಥವಾ ಮುಚ್ಚುವುದಕ್ಕೆ ಅಥವಾ ಇತರ ರೀತಿಯಲ್ಲಿ ಅಂಥ ಸ್ಮಾರಕವನ್ನು ಪರೀಕ್ಷಿಸುವುದಕ್ಕೆ ಅಗತ್ಯವಾಗಬಹುದಾದ ಪ್ರಾಚೀನ ಸ್ಮಾರಕದ ಸ್ಥಳಕ್ಕೆ ಹೊಂದಿಕೊಂಡಿರುವಂಥ ಭೂಮಿಯ ಭಾಗ; ಮತ್ತು

(iv) ಪ್ರಾಚೀನ ಸ್ಮಾರಕಕ್ಕೆ ಪ್ರವೇಶ ಅವಕಾಶದ ಮತ್ತು ಅದರ ಅನುಕೂಲಕರ ಪರಿಶೀಲನೆಯ ಸಾಧನಗಳು ಇವುಗಳನ್ನು ಒಳಗೊಳ್ಳುತ್ತದೆ;

-ಆದರೆ, ಇದು ರಾಷ್ಟ್ರೀಯ ಮಹತ್ವದ್ದೆಂದು ಸಂಸತ್ತು ರಚಿಸಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಘೋಷಿಸಲಾದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳನ್ನು ಒಳಗೊಳ್ಳತಕ್ಕದ್ದಲ್ಲ;

(2) "ಪುರಾತನ ವಸ್ತು" ಎಂಬುದು_

ಒಂದು ನೂರು ವರ್ಷಗಳಿಗೆ ಕಡಿಮೆಯಿಲ್ಲದಂತೆ ಅಸ್ತಿತ್ವದಲ್ಲಿರುವಂಥ,-

(i) ಯಾವುದೇ ನಾಣ್ಯ, ಶಿಲ್ಪ, ಹಸ್ತಪ್ರತಿ, ಶಾಸನ ಅಥವಾ ಕಲೆ ಅಥವಾ ಕುಶಲ ಕಲೆಯ ಇತರ ಕೃತಿ.

(ii) ಒಂದು ಕಟ್ಟಡ ಅಥವಾ ಗುಹೆಯಿಂದ ಬೇರ್ಪಡಿಸಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನು,

(iii) ಗತಕಾಲಗಳಲ್ಲಿನ ವಿಜ್ಞಾನ, ಕಲೆ, ಕುಶಲಕಲೆ, ಸಾಹಿತ್ಯ, ಧರ್ಮ, ರೂಢಿಗಳು ಅಥವಾ ನೀತಿಗಳನ್ನು ವಿವರಿಸುವ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನು,

(iv) ಐತಿಹಾಸಿಕ ಆಸ್ಥೆಯ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನು, ಮತ್ತು

(v) ಈ ಅಧಿನಿಯಮದ ಉದ್ದೇಶಗಳಿಗಾಗಿ, ಸರ್ಕಾರವು, ಪುರಾತನ ವಸ್ತು ಎಂಬುದಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಿದ ಯಾವುದೇ ವಸ್ತು, ಪದಾರ್ಥ ಅಥವಾ ಸಾಮಾನು,

-ಇವುಗಳನ್ನು ಒಳಗೊಳ್ಳುತ್ತದೆ.

(3) "ಪುರಾತತ್ವ ಸ್ಥಳ ಮತ್ತು ಅವಶೇಷಗಳು" ಎಂದರೆ ನೂರು ವರ್ಷಗಳಿಗಿಂತ ಕಡಿಮೆಯಿಲ್ಲದೆ ಅಸ್ತಿತ್ವದಲ್ಲಿರುವಂಥ ಐತಿಹಾಸಿಕ ಅಥವಾ ಪುರಾತತ್ವ ಮಹತ್ವವುಳ್ಳ ಭಗ್ನಾವಶೇಷಗಳು ಅಥವಾ ಪ್ರಾಚೀನ ಅವಶೇಷಗಳನ್ನು ಒಳಗೊಂಡಿರುವ ಅಥವಾ ಒಳಗೊಂಡಿವೆ ಎಂಬು ಯುಕ್ತವಾಗಿ ನಂಬಿರುವಂಥ ಯಾವುದೇ ಪ್ರದೇಶ; ಮತ್ತು ಇದು_

(i) ಆ ಪ್ರದೇಶಕ್ಕೆ ಬೇಲಿ ಹಾಕುವುದಕ್ಕೆ ಅಥವಾ ಮುಚ್ಚುವುದಕ್ಕೆ ಅಥವಾ ಅನ್ಯಥಾ ಅದನ್ನು ಪರಿರಕ್ಷಿಸುವುದಕ್ಕಾಗಿ ಅಗತ್ಯವಿರಬಹುದಾದಂಥ ಆ ಪ್ರದೇಶಕ್ಕೆ ಹೊಂದಿಕೊಂಡಂತಿರುವಂಥ ಭೂಮಿಯ ಭಾಗ, ಮತ್ತು

(ii) ಆ ಪ್ರದೇಶಕ್ಕೆ ಪ್ರವೇಶಾವಕಾಶಕ್ಕೆ ಮತ್ತು ಅದರ ಅನುಕೂಲಕರ ಪರಿಶೀಲನೆಯ ಸಾಧನಗಳು

-ಇವುಗಳನ್ನು ಒಳಗೊಳ್ಳುತ್ತದೆ;

(4) [1]["ಆಯುಕ್ತ"][1] ಎಂದರೆ ಪುರಾತತ್ವ ಇಲಾಖೆಯ [1][ಆಯುಕ್ತ][1] ಮತ್ತು ಇದು [1][ಆಯುಕ್ತ][1]ನ ಕರ್ತವ್ಯಗಳನ್ನು ನೆರವೇರಿಸಲು ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(5) "ಸರ್ಕಾರ" ಎಂದರೆ ರಾಜ್ಯ ಸರ್ಕಾರ;

(6) "ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದು" ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಂವಾದಿ ಪದಾವಳಿ, ಸಂರಕ್ಷಿತ ಸ್ಮಾರಕಕ್ಕೆ ಬೇಲಿ ಹಾಕುವುದು, ಮುಚ್ಚುವುದು, ದುರಸ್ತಿ ಮಾಡುವುದು, ಪೂರ್ವಸ್ಥಿತಿಗೆ ತರುವುದು ಮತ್ತು ಸ್ವಚ್ಛಗೊಳಿಸುವುದು ಮತ್ತು ಸಂರಕ್ಷಿತ ಸ್ಮಾರಕವನ್ನು ಪರಿರಕ್ಷಿಸುವ ಅಥವಾ ಅದಕ್ಕೆ ಅನುಕೂಲಕರ ಪ್ರವೇಶಾವಕಾಶವನ್ನು ಒದಗಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಯಾವುದೇ ಕಾರ್ಯವನ್ನು ಮಾಡುವುದು ಇವುಗಳನ್ನು ಒಳಗೊಳ್ಳುತ್ತದೆ;

(7) "ಒಡೆಯ" ಎಂಬುದು_

(i) ಅವನ ಪರವಾಗಿ ಮತ್ತು ಇತರ ಜಂಟಿ ಒಡೆಯರ ಪರವಾಗಿ ವ್ಯವಸ್ಥಾಪನೆಯ ಅಧಿಕಾರಗಳನ್ನು ನಿಹಿತಗೊಳಿಸಿದ ಜಂಟಿ ಒಡೆಯ, ಮತ್ತು ಯಾವನೇ ಅಂಥ ಒಡೆಯನ ಸ್ವಾಮ್ಯದಲ್ಲಿನ ಉತ್ತರಾಧಿಕಾರಿ; ಮತ್ತು

(ii) ವ್ಯವಸ್ಥಾಪನೆಯ ಅಧಿಕಾರಗಳನ್ನು ಚಲಾಯಿಸುವ ಯಾವನೇ ವ್ಯವಸ್ಥಾಪಕ ಅಥವಾ ನ್ಯಾಸಧಾರಿ ಮತ್ತು ಯಾವನೇ ಅಂಥ ವ್ಯವಸ್ಥಾಪಕ ಅಥವಾ ನ್ಯಾಸಧಾರಿಯ ಪದದಲ್ಲಿನ ಉತ್ತರಾಧಿಕಾರಿ

_ ಇವರನ್ನು ಒಳಗೊಳ್ಳುತ್ತದೆ;

(8) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(9) "ಸಂರಕ್ಷಿತ ಪ್ರದೇಶ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ಸಂರಕ್ಷಿಸಲಾಗಿರುವುದಾಗಿ ಘೋಷಿಸಲ್ಪಟ್ಟ ಯಾವುದೇ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳು;

(10) "ಸಂರಕ್ಷಿತ ಸ್ಮಾರಕ" ಎಂದರೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸಂರಕ್ಷಿತವಾಗಿರುವುದಾಗಿ ಘೋಷಿಸಲಾಗಿರುವಂಥ ಪ್ರಾಚೀನ ಸ್ಮಾರಕ.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

## ಸಂರಕ್ಷಿತ ಸ್ಮಾರಕಗಳು

**3. ಸಂರಕ್ಷಿತ ಸ್ಮಾರಕಗಳು ಮತ್ತು ಪ್ರದೇಶಗಳು ಎಂಬುದಾಗಿ ಭಾವಿಸಲಾದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳು.-** ಪ್ರಾಚೀನ ಸ್ಮಾರಕಗಳ ಪರಿರಕ್ಷಣೆ ಅಧಿನಿಯಮ, 1904 (ಕೇಂದ್ರ ಅಧಿನಿಯಮ 1904ರ VII) ಅಥವಾ ಪ್ರಾಚೀನ ಸ್ಮಾರಕಗಳ ಪರಿರಕ್ಷಣೆ ಅಧಿನಿಯಮ, 1337-ಎಫ್ (ಹೈದರಾಬಾದ್ ಅಧಿನಿಯಮ ಫಸಲಿ 1337ರ VIII) ಅಥವಾ ಮೈಸೂರು ಪ್ರಾಚೀನ ಸ್ಮಾರಕಗಳ ಪರಿರಕ್ಷಣಾ ಅಧಿನಿಯಮ, 1925 (ಮೈಸೂರು ಅಧಿನಿಯಮ 1925ರ IX) ಇವುಗಳ ಮೂಲಕ ಸಂರಕ್ಷಿತ ಸ್ಮಾರಕಗಳಾಗಿರುವುದಾಗಿ ಘೋಷಿಸಲಾಗಿರುವಂಥ ಆದರೆ ರಾಷ್ಟ್ರೀಯ ಮಹತ್ವವುಳ್ಳವುಗಳಾಗಿರುವುದಾಗಿ, ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಘೋಷಿಸಲಾಗಿಲ್ಲದಿರುವಂಥ ಎಲ್ಲ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಎಲ್ಲ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳನ್ನು ಈ ಅಧಿನಿಯಮದ ಮೇರೆಗೆ, ಸಂದರ್ಭಾನುಸಾರ, ಸಂರಕ್ಷಿತ ಸ್ಮಾರಕಗಳ ಅಥವಾ ಸಂರಕ್ಷಿತ ಪ್ರದೇಶಗಳು ಆಗಿರುವುದಾಗಿ ಘೋಷಿಸಲಾದ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಅಥವಾ ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳೆಂಬುದಾಗಿ ಭಾವಿಸತಕ್ಕದ್ದು.

**4. ಪ್ರಾಚೀನ ಸ್ಮಾರಕಗಳನ್ನು ಸಂರಕ್ಷಿತ ಸ್ಮಾರಕಗಳಾಗಿರುವುದಾಗಿ ಘೋಷಿಸಲು ಸರ್ಕಾರದ ಅಧಿಕಾರ.-** (1) ಸರ್ಕಾರವು, ಯಾವುದೇ ಪ್ರಾಚೀನ ಸ್ಮಾರಕವನ್ನು ಸಂರಕ್ಷಿತ ಸ್ಮಾರಕವೆಂದು ಘೋಷಿಸತಕ್ಕುದೆಂದು ಅಭಿಪ್ರಾಯಪಡುವಲ್ಲಿ, ಅದು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಪ್ರಾಚೀನ ಸ್ಮಾರಕವನ್ನು ಒಂದು ಸಂರಕ್ಷಿತ ಸ್ಮಾರಕವಗಿರುವುದಾಗಿ ಘೋಷಿಸಲು ಅದರ ಉದ್ದೇಶದ ಬಗ್ಗೆ ಎರಡು ತಿಂಗಳುಗಳ ನೋಟೀಸನ್ನು ನೀಡಬಹುದು ಮತ್ತು ಅಂಥ ಪ್ರತಿಯೊಂದು ಅಧಿಸೂಚನೆಯ ಒಂದು ಪ್ರತಿಯನ್ನು ಆ ಸ್ಮಾರಕದ ಸಮೀಪದ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು.

(2) ಅಂಥ ಯಾವುದೇ ಪ್ರಾಚೀನ ಸ್ಮಾರಕದಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯು, ಆ ಅಧಿಸೂಚನೆಯನ್ನು ಹೊರಡಿಸಿದ ತರುವಾಯ, ಎರಡು ತಿಂಗಳೊಳಗೆ ಆ ಸ್ಮಾರಕವನ್ನು ಸಂರಕ್ಷಿತ ಸ್ಮಾರಕವಾಗಿರುವುದಾಗಿ ಘೋಷಿಸುವ ಬಗ್ಗೆ ಆಕ್ಷೇಪಿಸಬಹುದು.

(3) ಎರಡು ತಿಂಗಳುಗಳ ಸದರಿ ಅವಧಿಯು ಮುಕ್ತಾಯವಾದ ಮೇಲೆ, ಸರ್ಕಾರವು, ಅದು ಸ್ವೀಕರಿಸಿದ ಆಕ್ಷೇಪಣೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ, ಆ ಪ್ರಾಚೀನ ಸ್ಮಾರಕವು ಸಂರಕ್ಷಿತ ಸ್ಮಾರಕವಾಗಿರುವುದಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಘೋಷಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಲಾದ ಅಧಿಸೂಚನೆಯು, ಅದನ್ನು ಹಿಂತೆಗೆದುಕೊಂಡ ಹೊರತು ಮತ್ತು ಅಲ್ಲಿಯವರೆಗೆ, ಅದು ಸಂಬಂಧಪಡುವಂಥ ಆ ಪ್ರಾಚೀನ ಸ್ಮಾರಕವು ಈ ಅಧಿನಿಯಮದ ಉದ್ದೇಶಗಳಿಗಾಗಿ ಸಂರಕ್ಷಿತ ಸ್ಮಾರಕವಾಗಿರುವ ಸಂಗತಿಯ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**5. ಸಂರಕ್ಷಿತ ಸ್ಮಾರಕದಲ್ಲಿನ ಹಕ್ಕುಗಳ ಆರ್ಜನೆ.-** (1) [1][ಆಯುಕ್ತ][1]ರು, ಸರ್ಕಾರದ ಮಂಜೂರಾತಿಯೊಂದಿಗೆ ಯಾವುದೇ ಸಂರಕ್ಷಿತ ಸ್ಮಾರಕವನ್ನು ಖರೀದಿಸಬಹುದು ಅಥವಾ ಅದನ್ನು ಗೇಣಿಗೆ ಪಡೆಯಬಹುದು ಅಥವಾ ದಾನವಾಗಿ ಅಥವಾ ಮರಣ ಶಾಸನ ದಾನವಾಗಿ ಅಂಗೀಕರಿಸಬಹುದು.

(2) ಸಂರಕ್ಷಿತ ಸ್ಮಾರಕಕ್ಕೆ ಒಡೆಯನಿಲ್ಲದಿರುವಲ್ಲಿ, [1][ಆಯುಕ್ತ][1]ನು ಸರ್ಕಾರಿ ರಾಜ್ಯ ಪತ್ರದಲ್ಲಿ, ಅಧಿಸೂಚನೆಯ ಮೂಲಕ, ಆ ಸ್ಮಾರಕದ ಪಾಲಕತ್ವವನ್ನು ವಹಿಸಿಕೊಳ್ಳಬಹುದು.

(3) ಯಾವುದೇ ಸಂರಕ್ಷಿತ ಸ್ಮಾರಕದ ಒಡೆಯನು ಬರಹದಲ್ಲಿನ ಲಿಖಿತದ ಮೂಲಕ, [1][ಆಯುಕ್ತ][1]ನು ಆ ಸ್ಮಾರಕದ ಪಾಲಕನನ್ನಾಗಿ ಮಾಡಬಹುದು ಮತ್ತು ಆ [1][ಆಯುಕ್ತ][1]ನು, ಸರ್ಕಾರದ ಮಂಜೂರಾತಿಯೊಂದಿಗೆ ಅಂಥ ಪಾಲಕತ್ವವನ್ನು ಅಂಗೀಕರಿಸಬಹುದು.

(4) [1][ಆಯುಕ್ತ][1]ನು, (3)ನೇ ಉಪಪ್ರಕರಣದ ಮೇರೆಗೆ, ಸ್ಮಾರಕದ ಪಾಲಕತ್ವವನ್ನು ಅಂಗೀಕರಿಸಿರುವಾಗ, ಒಡೆಯನು, ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವಂತೆ ಹೊರತು, [1][ಆಯುಕ್ತ][1]ನನ್ನು ಅದರ ಪಾಲಕನನ್ನಾಗಿ ಮಾಡಿಲ್ಲದಿದ್ದರೆ ಹೇಗೋ ಹಾಗೆ ಸ್ಮಾರಕದಲ್ಲಿ ಮತ್ತು ಅದಕ್ಕೆ ಅದೇ ಸಂಪದ, ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯನ್ನು ಹೊಂದಿರ ತಕ್ಕದ್ದು.

(5) [1][ಆಯುಕ್ತ][1]ನು, (3)ನೇ ಉಪಪ್ರಕರಣದ ಮೇರೆಗೆ, ಸ್ಮಾರಕದ ಪಾಲಕತ್ವವನ್ನು ಅಂಗೀಕರಿಸಿರುವಾಗ, 6ನೇ ಪ್ರಕರಣದ ಮೇರೆಗೆ ಬರೆದುಕೊಟ್ಟ ಒಪ್ಪಂದಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳು, ಸದರಿ ಉಪಪ್ರಕರಣದ ಮೇರೆಗೆ ಬರೆದುಕೊಟ್ಟ ಬರಹದಲ್ಲಿನ ಲಿಖಿತಕ್ಕೆ ಅನ್ವಯವಾಗತಕ್ಕದ್ದು.

(6) ಈ ಪ್ರಕರಣದಲ್ಲಿರುವುದು ಯಾವುದೂ, ರೂಢಿಗತ ಧಾರ್ಮಿಕ ಆಚರಣೆಗಳಿಗಾಗಿ ಯಾವುದೇ ಸಂರಕ್ಷಿತ ಸ್ಮಾರಕವನ್ನು ಉಪಯೋಗಿಸುವುದಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(1) 2024ರ ಅಧಿನಿಯಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**6. ಒಪ್ಪಂದದ ಮೂಲಕ ಸಂರಕ್ಷಿತ ಸ್ಮಾರಕದ ಪರಿರಕ್ಷಣೆ.-**(1) ಡೆಪ್ಯುಟಿ ಕಮೀಷನರನು ಸರ್ಕಾರವು ಹಾಗೆ ನಿರ್ದೇಶಿಸಿದಾಗ ಆ ಸ್ಮಾರಕವನ್ನು ಸುಸ್ಥಿತಿಯಲ್ಲಿ ಇಟ್ಟುಕೊಂಡು ಬರುವುದಕ್ಕಾಗಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಸರ್ಕಾರದೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳಲು ಸಂರಕ್ಷಿತ ಸ್ಮಾರಕದ ಒಡೆಯನಿಗೆ ಸೂಚಿಸತಕ್ಕದ್ದು.

(2) ಈ ಪ್ರಕರಣದ ಮೇರೆಗಿನ ಒಪ್ಪಂದವು, ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:-

(ಎ) ಸ್ಮಾರಕವನ್ನು ಸುಸ್ಥಿತಿಯಲ್ಲಿಡುವುದು;

(ಬಿ) ಸ್ಮಾರಕದ ಅಭಿರಕ್ಷೆ ಮತ್ತು ಅದನ್ನು ಕಾಯಲು ನಿಯೋಜಿಸಬಹುದಾದ ಯಾವನೇ ವ್ಯಕ್ತಿಯ ಕರ್ತವ್ಯಗಳು;

(ಸಿ) (i) ಯಾವುದೇ ಉದ್ದೇಶಕ್ಕಾಗಿ ಸ್ಮಾರಕವನ್ನು ಉಪಯೋಗಿಸಲು,

(ii) ಸ್ಮಾರಕದೊಳಗೆ ಪ್ರವೇಶಿಸುವುದಕ್ಕಾಗಿ ಅಥವಾ ಅದರ ಪರಿಶೀಲನೆಗಾಗಿ ಯಾವುದೇ ಫೀಜನ್ನು ವಿಧಿಸಲು,

(iii) ಸ್ಮಾರಕವನ್ನು ನಾಶಪಡಿಸಲು, ತೆಗೆದುಹಾಕಲು, ಬದಲಾಯಿಸಲು ಅಥವಾ ವಿರೂಪಗೊಳಿಸಲು, ಅಥವಾ

(iv) ಸ್ಮಾರಕದ ಸ್ಥಳದ ಮೇಲೆ ಅಥವಾ ಅದರ ಹತ್ತಿರ ಕಟ್ಟಡ ಕಟ್ಟಲು ಒಡೆಯನ ಹಕ್ಕಿನ ಬಗ್ಗೆ ಪರಿಬಂಧ;

(ಡಿ) ಸಾರ್ವಜನಿಕರಿಗೆ ಅಥವಾ ಅದರ ಯಾವುದೇ ವರ್ಗಕ್ಕೆ ಅನುಮತಿಸಬೇಕಾದ ಪ್ರವೇಶಾವಕಾಶ ಅಥವಾ ಆ ಸ್ಮಾರಕವನ್ನು ಪರಿಶೀಲಿಸಲು ಅಥವಾ ಸುಸ್ಥಿತಿಯಲ್ಲಿಟ್ಟುಕೊಂಡು ಬರಲು ಪುರಾತತ್ವ ಇಲಾಖೆಯ ಯಾವನೇ ಅಧಿಕಾರಿ ಅಥವಾ [1][ಆಯುಕ್ತ][1]ನು ಅಥವಾ ಡೆಪ್ಯುಟಿ ಕಮೀಷನರನು ಅಥವಾ ಒಡೆಯನು ಪ್ರತಿಯೋಜಿಸಿದ ವ್ಯಕ್ತಿಗಳಿಗೆ ಸೌಲಭ್ಯಗಳು;

(ಇ) ಒಡೆಯನು, ಆ ಸ್ಮಾರಕವು ಇರುವಂಥ ಭೂಮಿ ಅಥವಾ ಹೊಂದಿಕೊಂಡಿರುವ ಯಾವುದೇ ಭೂಮಿಯನ್ನು ಮಾರಾಕ್ಕಾಗಿ ಕೊಡ ಮಾಡಿರುವ ಸಂದರ್ಭದಲ್ಲಿ ಸರ್ಕಾರಕ್ಕೆ ಕೊಡಬೇಕಾದ ನೋಟಿಸು, ಮತ್ತು ಅಂಥ ಭೂಮಿ ಅಥವಾ ಅಂಥ ಭೂಮಿಯ ಯಾವುದೇ ನಿರ್ದಿಷ್ಟಪಡಿಸಿದ ಭಾಗವನ್ನು ಅದರ ಮಾರುಕಟ್ಟೆ ಮೌಲ್ಯಕ್ಕೆ ಖರೀದಿಸಲು ಸರ್ಕಾರಕ್ಕೆ ಕಾಯ್ದಿಡಬೇಕಾದ ಹಕ್ಕು;

(ಎಫ್) ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಒಡೆಯ ಅಥವಾ ಸರ್ಕಾರವು ವಹಿಸಿದ ಯಾವುದೇ ವೆಚ್ಚಗಳ ಸಂದಾಯ;

(ಜಿ) ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ಯಾವುದೇ ವೆಚ್ಚಗಳನ್ನು ವಹಿಸಿದಾಗ ಆ ಸ್ಮಾರಕಕ್ಕೆ ಸಂಬಂಧಿಸಿದಂತೆ ಸರ್ಕಾರದಲ್ಲಿ ನಿಹಿತವಾಗಬೇಕಾದಂಥ ಮಾಲೀಕತ್ವ ಅಥವಾ ಇತರ ಹಕ್ಕುಗಳು;

(ಎಚ್) ಆ ಒಪ್ಪಂದದಿಂದ ಉದ್ಭವಿಸುವಂಥ ಯಾವುದೇ ವಿವಾದವನ್ನು ತೀರ್ಮಾನಿಸಲು ಪ್ರಾಧಿಕಾರದ ನೇಮಕಾತಿ; ಮತ್ತು

(ಐ) ಒಡೆಯ ಮತ್ತು ಸರ್ಕಾರದ ನಡುವಣ ಒಪ್ಪಂದದ ಸರಿಯಾದ ವಸ್ತುವಾಗಿರುವಂಥ, ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕೆ ಸಂಬಂಧಿಸಿದ ಯಾವುದೇ ವಿಷಯ.

(3) ಸರ್ಕಾರ ಅಥವಾ ಒಡೆಯನು ಈ ಪ್ರಕರಣದ ಮೇರೆಗೆ ಒಪ್ಪಂದವನ್ನು ಬರೆದುಕೊಟ್ಟ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಕಾಲದಲ್ಲಿ ಬರಹದಲ್ಲಿ ಆರು ತಿಂಗಳುಗಳ ನೋಟೀಸನ್ನು ಕೊಟ್ಟ ಮೇಲೆ ಅದನ್ನು ಕೊನೆಗೊಳಿಸಬಹುದು:

ಪರಂತು, ಒಡೆಯನು, ಐದು ವರ್ಷಗಳಿಗಿಂತ ಹೆಚ್ಚಾಗಿ ಜಾರಿಯಲ್ಲಿರುವಂಥ ಒಪ್ಪಂದದ ಸಂದರ್ಭದಲ್ಲಿ, ಅಥವಾ ಒಪ್ಪಂದವು ಜಾರಿಯಲ್ಲಿರುವ ಅವಧಿಯಲ್ಲಿ ಐದು ವರ್ಷಗಳಿಗಿಂತ ಜಾಸ್ತಿಯಿಲ್ಲದ ಕಾಲದಲ್ಲಿ ಆ ಒಪ್ಪಂದವು ಜಾರಿಯಲ್ಲಿದ್ದರೆ, ಆ ಒಪ್ಪಂದವನ್ನು ಕೊನೆಗೊಳಿಸಿದ ನಿಕಟ ಪೂರ್ವದ ಐದು ವರ್ಷಗಳ ಅವಧಿಯಲ್ಲಿ ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದರ ಬಗ್ಗೆ ಅದು ವಹಿಸಿದ ವೆಚ್ಚಗಳು ಯಾವುವಾದರೂ ಇದ್ದರೆ, ಅವುಗಳನ್ನು ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು.

(4) ಈ ಪ್ರಕರಣದ ಮೇರೆಗಿನ ಒಪ್ಪಂದವು ಅದು ಸಂಬಂಧಪಡುವಂಥ ಸ್ಮಾರಕದ ಒಡೆಯನೆಂದು ಆ ಒಪ್ಪಂದವನ್ನು ಯಾವ ಪಕ್ಷಕಾರನು ಬರೆದುಕೊಟ್ಟನೋ ಅಥವಾ ಯಾವ ಪಕ್ಷಕಾರನ ಪರವಾಗಿ ಅದನ್ನು ಬರೆದುಕೊಡಲಾಯಿತೋ ಆ ಪಕ್ಷಕಾರನಿಂದ, ಅವನ ಮೂಲಕ ಅಥವಾ ಅವನ ಅಧೀನದಲ್ಲಿ ಕ್ಲೇಮು ಮಾಡುವ ಯಾವನೇ ವ್ಯಕ್ತಿಯ ಮೇಲೆ ಬಂಧನಕಾರಿಯಾಗಿರತಕ್ಕದ್ದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**7. ಅಸಮರ್ಥತೆಯಲ್ಲಿರುವ ಅಥವಾ ಸ್ವಾಧೀನದಲ್ಲಿಲ್ಲದ ಒಡೆಯರು.-** (1) ಒಂದು ಸಂರಕ್ಷಿತ ಸ್ಮಾರಕದ ಒಡೆಯನು ಬಾಲ್ಯಾವಸ್ಥೆ ಅಥವಾ ಯಾವುದೇ ಅಥವಾ ಇತರ ಅಸಮರ್ಥತೆಯಿಂದಾಗಿ, ಅವನೇ ಕಾರ್ಯ ನಿರ್ವಹಿಸಲು ಅಸಮರ್ಥನಾಗಿದ್ದರೆ ಅವನ ಪರವಾಗಿ ಕಾರ್ಯ ನಿರ್ವಹಿಸಲು ಸಕ್ಷಮನಾದ ವ್ಯಕ್ತಿಯು 6ನೇ ಪ್ರಕರಣದ ಮೂಲಕ ಒಡೆಯನಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಬಹುದು.

(2) ಗ್ರಾಮದ ಸ್ವತ್ತಿನ ಸಂದರ್ಭದಲ್ಲಿ ಅಂಥ ಸ್ವತ್ತಿನ ಮೇಲೆ, ವ್ಯವಸ್ಥಾಪನೆಯ ಅಧಿಕಾರಗಳನ್ನು ಚಲಾಯಿಸುವ ಗ್ರಾಮ ಅಧಿಕಾರಿಯು ಅಥವಾ ಯಾವನೇ ಇತರ ವ್ಯಕ್ತಿಯು 6ನೇ ಪ್ರಕರಣದ ಮೂಲಕ ಒಡೆಯನಿಗೆ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಬಹುದು.

(3) ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾರ ಪರವಾಗಿ ಅವನು ಕಾರ್ಯ ನಿರ್ಹಿಸುತ್ತಿರುವನೋ ಆ ವ್ಯಕ್ತಿಯಂತೆ ಅದೇ ಧರ್ಮದವನಾಗಿಲ್ಲದ ಯಾವನೇ ವ್ಯಕ್ತಿಯನ್ನು ಯಾವ

ಸಂರಕ್ಷಿತ ಸ್ಮಾರಕ ಅಥವಾ ಅದರ ಯಾವುದೇ ಭಾಗವನ್ನು ಧಾರ್ಮಿಕ ಆರಾಧನೆ ಅಥವಾ ಆ ಧರ್ಮದ ಆಚರಣೆಗಳಿಗಾಗಿ ನಿಯತಕಾಲಿಕವಾಗಿ ಉಪಯೋಗಿಸಲಾಗುತ್ತಿದೆಯೋ ಆ ಸಂರಕ್ಷಿತ ಸ್ಮಾರಕಕ್ಕೆ ಸಂಬಂಧಪಟ್ಟ ಒಪ್ಪಂದವನ್ನು ಮಾಡಿಕೊಳ್ಳಲು ಅಥವಾ ಬರೆದುಕೊಡಲು ಶಕ್ತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ.

**8. ಸಂರಕ್ಷಿತ ಸ್ಮಾರಕವನ್ನು ದುರಸ್ತಿ ಮಾಡಲು ದತ್ತಿಯ ವಿನಿಯೋಗ.-** (1) ಸಂರಕ್ಷಿತ ಸ್ಮಾರಕವನ್ನು ದುರಸ್ತಿಯಲ್ಲಿ ಇಟ್ಟುಕೊಂಡು ಬರುವುದಕ್ಕಾಗಿ 6ನೇ ಪ್ರಕರಣದ ಮೇರೆಗೆ ಒಪ್ಪಂದವನ್ನು ಮಾಡಿಕೊಳ್ಳಲು ಸಕ್ಷಮನಾದ ಯಾವನೇ ಒಡೆಯ ಅಥವಾ ಇತರ ವ್ಯಕ್ತಿಯು ಅಂಥ ಒಪ್ಪಂದವನ್ನು ಮಾಡಿಕೊಳ್ಳಲು ನಿರಾಕರಿಸಿದರೆ ಅಥವಾ ತಪ್ಪಿದರೆ ಮತ್ತು ಅಂಥ ಸ್ಮಾರಕವನ್ನು ದುರಸ್ತಿಯಲ್ಲಿಡುವ ಉದ್ದೇಶಕ್ಕಾಗಿ ಅಥವಾ ಇತರ ಉದ್ದೇಶಗಳ ಪೈಕಿ ಆ ಉದ್ದೇಶಕ್ಕಾಗಿ ಯಾವುದೇ ದತ್ತಿಯನ್ನು ಸೃಜಿಸಲಾಗಿದ್ದರೆ, ಸರ್ಕಾರವು, ಅಂಥ ದತ್ತಿ ಅಥವಾ ಅದರ ಭಾಗದ ಸರಿಯಾದ ವಿನಿಯೋಗಕ್ಕಾಗಿ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಬಹುದು, ಅಥವಾ ಆ ಸ್ಮಾರಕವನ್ನು ದುರಸ್ತಿ ಮಾಡುವುದಕ್ಕೆ ಅಂದಾಜು ಖರ್ಚು ಒಂದು ಸಾವಿರ ರೂಪಾಯಿಗಳನ್ನು ಮೀರದಿದ್ದರೆ, ಜಿಲ್ಲಾ ನ್ಯಾಯಾಧೀಶನಿಗೆ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗಿನ ಅರ್ಜಿಯ ಸುನಾವಣೆ ಆದ ಮೇಲೆ, ಜಿಲ್ಲಾ ನ್ಯಾಯಾಧೀಶನು, ಆ ಒಡೆಯ ಮತ್ತು ಯಾವ ವ್ಯಕ್ತಿಯ ಸಾಕ್ಷ್ಯವು ಅವನಿಗೆ ಅವಶ್ಯವೆಂದು ಕಂಡು ಬರುವುದೋ, ಆ ಯಾವನೇ ವ್ಯಕ್ತಿಯನ್ನು ಸಮನು ಮಾಡಬಹುದು ಮತ್ತು ಪರೀಕ್ಷಿಸಬಹುದು ಮತ್ತು ಆ ದತ್ತಿ ಅಥವಾ ಅದರ ಯಾವುದೇ ಭಾಗದ ಸರಿಯಾದ ವಿನಿಯೋಗಕ್ಕಾಗಿ ಆದೇಶವನ್ನು ಮಾಡಬಹುದು ಮತ್ತು ಅಂಥ ಯಾವುದೇ ಆದೇಶವನ್ನು, ಅದು ಸಿವಿಲ್ ನ್ಯಾಯಾಲಯದ ಡಿಕ್ರಿಯಾಗಿದ್ದರೆ ಹೇಗೋ ಹಾಗೆ *ಅವಾಲ್ಜಾರಿಗೊಳಿಸಬಹುದು.*

**9. ಒಪ್ಪಂದವನ್ನು ಮಾಡಿಕೊಳ್ಳಲು ತಪ್ಪುವುದು ಅಥವಾ ನಿರಾಕರಿಸುವುದು.-** (1) ಸಂರಕ್ಷಿತ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಲು 6ನೇ ಪ್ರಕರಣದ ಮೇರೆಗೆ ಒಪ್ಪಂದವನ್ನು ಮಾಡಿಕೊಳ್ಳಲು ಸಕ್ಷಮನಾದ ಒಡೆಯ ಅಥವಾ ಇತರ ವ್ಯಕ್ತಿಯು ಅಂಥ ಒಪ್ಪಂದವನ್ನು ಮಾಡಿಕೊಳ್ಳಲು ನಿರಾಕರಿಸಿದರೆ ಅಥವಾ ತಪ್ಪಿದರೆ, ಸರ್ಕಾರವು, 6ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಅಥವಾ ಯಾವುದೇ ವಿಷಯಕ್ಕಾಗಿ ಉಪ ಬಂಧಿಸಿ ಆದೇಶವನ್ನು ಮಾಡಬಹುದು ಮತ್ತು ಅಂಥ ಆದೇಶವು ಆ ಒಡೆಯ ಅಥವಾ ಅಂಥ ಇತರ ವ್ಯಕ್ತಿಯ ಮೇಲೆ ಮತ್ತು ಆ ಒಡೆಯ ಅಥವಾ ಅಂಥ ಇತರ ವ್ಯಕ್ತಿಯಿಂದ, ಅವನ ಮೂಲಕ ಅಥವಾ ಅವನ ಅಡಿಯಲ್ಲಿ ಆ ಸ್ಮಾರಕಕ್ಕೆ ಸ್ವಾಮ್ಯವನ್ನು ಕ್ಲೇಮು ಮಾಡುವ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಬಂಧನಕಾರಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶವು, ಸಕ್ಷಮನಾದ ಒಡೆಯ ಅಥವಾ ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರತಕ್ಕದ್ದೆಂದು ಉಪಬಂಧಿಸಿರುವಲ್ಲಿ ಇತರ ವ್ಯಕ್ತಿಯು ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿನ ಎಲ್ಲಾ ಯುಕ್ತ ವೆಚ್ಚಗಳನ್ನು ಸರ್ಕಾರವು ಸಂದಾಯ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು ಉದ್ದೇಶಿತ ಆದೇಶಕ್ಕೆ ವಿರುದ್ಧವಾಗಿ ಬರಹದಲ್ಲಿ ಮನವಿಯನ್ನು ಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಒಡೆಯ ಅಥವಾ ಇತರ ವ್ಯಕ್ತಿಗೆ ಕೊಡಲಾಗಿದ್ದ ಹೊರತು ಮಾಡತಕ್ಕದ್ದಲ್ಲ.

**10. 6ನೇ ಪ್ರಕರಣದ ಮೇರೆಗಿನ ಒಪ್ಪಂದದ ಉಲ್ಲಂಘನೆಯನ್ನು ನಿಷೇಧಿಸುವ ಆದೇಶವನ್ನು ಮಾಡುವ ಅಧಿಕಾರ.-** (1) [1][ಆಯುಕ್ತ][1]ನು ಸಂರಕ್ಷಿತ ಸ್ಮಾರಕದ ಒಡೆಯ ಅಥವಾ ಅಧಿಭೋಗದಾರನು 6ನೇ ಪ್ರಕರಣದ ಮೇರೆಗಿನ ಒಪ್ಪಂದದ ನಿಬಂಧನೆಗಳನ್ನು ಉಲ್ಲಂಘಿಸಿ ಆ ಸ್ಮಾರಕವನ್ನು ನಾಶಪಡಿಸಲು, ತೆಗೆದುಹಾಕಲು, ಬದಲಾಯಿಸಲು, ವಿರೂಪಗೊಳಿಸಲು, ಅಪಾಯವುಂಟು ಮಾಡಲು ಅಥವಾ ದುರುಪಯೋಗ ಮಾಡಲು ಉದ್ದೇಶಿಸಿರುವನೆಂದು ಅಥವಾ ಅದರ ಸ್ಥಳದ ಮೇಲೆ ಅಥವಾ ಅದರ ಹತ್ತಿರ ಕಟ್ಟಡವನ್ನು ಕಟ್ಟಲು ಉದ್ದೇಶಿಸಿರುವನೆಂದು ಶಂಕಿಸಿದರೆ, [1][ಆಯುಕ್ತ][1]ನು, ಒಡೆಯ ಅಥವಾ ಅಧಿಭೋಗದಾರನಿಗೆ ಬರಹದಲ್ಲಿ ಮನವಿಯನ್ನು ಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ಒಪ್ಪಂದದ ಯಾವುದೇ ಅಂಥ ಉಲ್ಲಂಘನೆಯನ್ನು ನಿಷೇಧಿಸಿ ಆದೇಶವನ್ನು ಮಾಡಬಹುದು:

ಪರಂತು, ಅಂಥ ಯಾವುದೇ ಅವಕಾಶವನ್ನು [1][ಆಯುಕ್ತ][1]ನು, ದಾಖಲು ಮಾಡಬೇಕಾದ ಕಾರಣಗಳಿಗಾಗಿ ಹಾಗೆ ಮಾಡುವುದು ವಿಹಿತ ಅಥವಾ ಕಾರ್ಯಸಾಧ್ಯವಲ್ಲವೆಂದು ಮನದಟ್ಟು ಮಾಡಿಕೊಂಡಿರುವಲ್ಲಿ ಅಂಥ ಅವಕಾಶವನ್ನು ಕೊಡಬೇಕಾಗಿಲ್ಲ.

(2) ಈ ಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಸರ್ಕಾರಕ್ಕೆ ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ರೀತಿಯಲ್ಲಿ ಅಪೀಲು ಮಾಡಿಕೊಳ್ಳಬಹುದು ಮತ್ತು ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**11. ಒಪ್ಪಂದಗಳ ಜಾರಿ.-** (1) 6ನೇ ಪ್ರಕರಣದ ಮೇರೆಗೆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ ಒಪ್ಪಂದದ ಮೂಲಕ ಬದ್ಧನಾದ ಒಡೆಯ ಅಥವಾ ಇತರ ವ್ಯಕ್ತಿಯು, [1][ಆಯುಕ್ತ][1]ನು ಆ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ [1][ಆಯುಕ್ತ][1]ನು ಅವಶ್ಯವೆಂದು ಅಭಿಪ್ರಾಯಪಡುವಂಥ ಯಾವುದೇ ಕಾರ್ಯವನ್ನು ಮಾಡಲು ನಿಗದಿಪಡಿಸಬಹುದಾದಂಥ ಯುಕ್ತ ಕಾಲದೊಳಗೆ ಮಾಡಲು ನಿರಾಕರಿಸಿದರೆ ಅಥವಾ ತಪ್ಪಿದರೆ, [1][ಆಯುಕ್ತ][1]ನು ಅಂಥ ಯಾವುದೇ ಕಾರ್ಯವನ್ನು ಮಾಡಲು ಯಾವನೇ ವ್ಯಕ್ತಿಯನ್ನು ಅಧಿಕೃತಗೊಳಿಸಬಹುದು ಮತ್ತು ಒಡೆಯ ಅಥವ ಇತರ ವ್ಯಕ್ತಿಯು ಅಂಥ ಯಾವುದೇ ಕಾರ್ಯವನ್ನು ಮಾಡಲು ತಗಲುವ ವೆಚ್ಚಗಳು ಅಥವಾ ಆ ಒಪ್ಪಂದದ ಮೇರೆಗೆ ಒಡೆಯನು ಸಂದಾಯ ಮಾಡಲು ಹೊಣೆಗಾರನಾಗಬಹುದಾದ ವೆಚ್ಚಗಳ ಅಂಥ ಭಾಗವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಒಡೆಯ ಅಥವಾ ಇತರ ವ್ಯಕ್ತಿಯು ಸಂದಾಯ ಮಾಡಬೇಕಾದ ವೆಚ್ಚಗಳ ಮೊಬಲಗಿನ ಬಗ್ಗೆ ಯಾವುದೇ ವಿವಾದವು ಉದ್ಭವಿಸಿದರೆ, ಅದನ್ನು ಸರ್ಕಾರಕ್ಕೆ ಒಪ್ಪಿಸತಕ್ಕದ್ದು, ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**12. ಕೆಲವು ಮಾರಾಟಗಳಲ್ಲಿ ಖರೀದಿದಾರರು ಮತ್ತು ಒಡೆಯನ ಮೂಲಕ ಕ್ಲೇಮು ಮಾಡುವ ವ್ಯಕ್ತಿಗಳು ಒಡೆಯನು ಬರೆದುಕೊಟ್ಟ ಲಿಖಿತಕ್ಕೆ ಬದ್ಧರಾಗಿರತಕ್ಕದ್ದು.-**5ನೇ ಪ್ರಕರಣ

ಅಥವಾ 6ನೇ ಪ್ರಕರಣದ ಮೇರೆಗೆ ತತ್ಕಾಲದಲ್ಲಿ ಒಡೆಯನು ಯಾವ ಸ್ಮಾರಕಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತವನ್ನು ಬರೆದುಕೊಟ್ಟಿರುವನೋ ಆ ಸ್ಮಾರಕವು ಇರುವಂಥ ಯಾವುದೇ ಭೂಮಿಯನ್ನು, ಭೂಕಂದಾಯದ ಅಥವಾ ಯಾವುದೇ ಸರ್ಕಾರಿ ತಗಾದೆಯ ಬಾಕಿಗಳಿಗಾಗಿನ ಮಾರಾಟದಲ್ಲಿ ಖರೀದಿಸುವ ಪ್ರತಿಯೊಬ್ಬ ವ್ಯಕ್ತಿ ಮತ್ತು ಅಂಥ ಯಾವುದೇ ಲಿಖಿತವನ್ನು ಬರೆದುಕೊಟ್ಟ ಒಡೆಯನಿಂದ ಅವನ ಮೂಲಕ ಅಥವಾ ಅವನಿಗೆ ಅಧೀನವಾಗಿ ಸ್ಮಾರಕದ ಯಾವುದೇ ಹಕ್ಕು ಸ್ವಾಮ್ಯವನ್ನು ಕ್ಲೇಮು ಮಾಡುವ ಪ್ರತಿಯೊಬ್ಬ ವ್ಯಕ್ತಿಯು ಅಂಥ ಲಿಖಿತಕ್ಕೆ ಬದ್ಧನಾಗಿರತಕ್ಕದ್ದು.

**13. ಸಂರಕ್ಷಿತ ಸ್ಮಾರಕದ ಆರ್ಜನೆ .-** ಸಂರಕ್ಷಿತ ಸ್ಮಾರಕವು ನಾಶವಾಗುವ ಹಾನಿಗೊಳಗಾಗುವ, ದುರುಪಯೋಗವಾಗುವ ಅಥವಾ ಕ್ಷೀಣವಾಗಲು ಅವಕಾಶವಿರುವ ಅಪಾಯವಿದೆ ಎಂದು ಸರ್ಕಾರವು ಶಂಕಿಸಿದರೆ, ಅದು ಭೂ ಆರ್ಜನಾ ಅಧಿನಿಯಮ, 1894ರ ಉಪಬಂಧಗಳ ಮೇರೆಗೆ, ಸಂರಕ್ಷಿತ ಸ್ಮಾರಕವನ್ನು, ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದು ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ಉದ್ದೇಶವಾಗಿದ್ದಿದ್ದರೆ ಹೇಗೋ ಹಾಗೆ ಆ ಸಂರಕ್ಷಿತ ಸ್ಮಾರಕವನ್ನು ಆರ್ಜಿಸಬಹುದು.

**14. ಕೆಲವು ಸಂರಕ್ಷಿತ ಸ್ಮಾರಕಗಳನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದು.-** (1) 13ನೇ ಪ್ರಕರಣದ ಮೇರೆಗೆ ಆರ್ಜಿಸಿದಂಥ ಅಥವಾ ಯಾವುದಕ್ಕೆ ಸಂಬಂಧಿಸಿದಂತೆ 5ನೇ ಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಹಕ್ಕನ್ನು ಆರ್ಜಿಸಲಾಗಿದೆಯೋ ಆ ಪ್ರತಿಯೊಂದು ಸ್ಮಾರಕವನ್ನು ಸರ್ಕಾರವು ಸುಸ್ಥಿತಿಯಲ್ಲಿಟ್ಟುಕೊಂಡು ಬರತಕ್ಕದ್ದು.

(2) 5ನೇ ಪ್ರಕರಣದ ಮೇರೆಗೆ ಸ್ಮಾರಕದ ಪಾಲಕತ್ವವನ್ನು [1][ಆಯುಕ್ತ][1]ನು ಅಂಗೀಕರಿಸಿರುವಾಗ, ಅವನು ಅಂಥ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವ ಉದ್ದೇಶಕ್ಕಾಗಿ, ಆ ಸ್ಮಾರಕವನ್ನು ಪರಿಶೀಲಿಸುವ ಉದ್ದೇಶಕ್ಕಾಗಿ ಮತ್ತು ಅದನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿ ಅವಶ್ಯ ಅಥವಾ ಅಪೇಕ್ಷಣೀಯವೆಂದು ಅವನು ಪರ್ಯಾಲೋಚಿಸಬಹುದಾದಂಥ ವಸ್ತುಗಳನ್ನು ತರುವ ಮತ್ತು ಅಂಥ ಕಾರ್ಯಗಳನ್ನು ಮಾಡುವ ಉದ್ದೇಶಕ್ಕಾಗಿ ಎಲ್ಲ ಯುಕ್ತ ವೇಳೆಗಳಲ್ಲಿ ಆ ಸ್ಮಾರಕಕ್ಕೆ ಸ್ವತ: ಮತ್ತು ಅವನ ಏಜೆಂಟರು, ಅಧೀನರು ಮತ್ತು ಕೆಲಸಗಾರರ ಮೂಲಕ ಪ್ರವೇಶಾವಕಾಶವನ್ನು ಹೊಂದಿರತಕ್ಕದ್ದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**15. ಸ್ವಯಿಚ್ಛೆಯ ವಂತಿಕೆಗಳು**.- [2][(1)][2] [1][ಆಯುಕ್ತ][1]ನು ಸಂರಕ್ಷಿತ ಸ್ಮಾರಕವನ್ನು ಸುಸ್ಥಿತಿಯಲ್ಲಿಟ್ಟುಕೊಂಡು ಬರುವುದಕ್ಕಾಗಿನ ವೆಚ್ಚಗಳಿಗಾಗಿ ಸ್ವಯಿಚ್ಛೆ ವಂತಿಗೆಗಳನ್ನು ಸ್ವೀಕರಿಸಬಹುದು ಮತ್ತು ಅವನು ಹಾಗೆ ಸ್ವೀಕರಿಸಿದ ಯಾವುದೇ ನಿಧಿಗಳ ವ್ಯವಸ್ಥಾಪನೆ ಮತ್ತು ವಿನಿಯೋಗದ ಬಗ್ಗೆ ಆದೇಶಗಳನ್ನು ನೀಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಸ್ವೀಕರಿಸಲಾದ ಯಾವುದೇ ವಂತಿಗೆಯನ್ನು, ಯಾವುದಕ್ಕಾಗಿ ವಂತಿಗೆಯನ್ನು ನೀಡಲಾಯಿತೋ ಆ ಉದ್ದೇಶಕ್ಕಾಗಿ ಹೊರತು ಇತರ ಯಾವುದೇ ಉದ್ದೇಶಕ್ಕೆ ವಿನಿಯೋಗಿಸತಕ್ಕದ್ದಲ್ಲ.

[2][(2) ಸ್ಮಾರಕವನ್ನು ದತ್ತು ತೆಗೆದುಕೊಳ್ಳುವ ಯೋಜನೆಯಡಿಯಲ್ಲಿ ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿಗಳು ಅಥವಾ ರೂಪಿಸಿರುವ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ, ಕಂಪನಿ ಅಥವಾ ಫರ್ಮ್

ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ (LLP) ಸಂಸ್ಥೆ, ಪಾಲುದಾರಿಕೆ ಫರ್ಮ್, ಆಸಕ್ತಿಯುಳ್ಳ ಸೊಸೈಟಿಗಳು ಅಥವಾ ಸಹಕಾರ ಸಂಘಗಳು, ಟ್ರಸ್ಟ್‌ಗಳು ಅಥವಾ ಸರ್ಕಾರೇತರ ಸಂಸ್ಥೆಗಳು ಅಥವಾ ಆಸಕ್ತಿಯುಳ್ಳ ವ್ಯಕ್ತಿಗಳು, ಅವರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR) ಕಾರ್ಯಕ್ರಮಗಳ ಅಡಿಯಲ್ಲಿ ಕರ್ನಾಟಕದಾದ್ಯಂತವಿರುವ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳು, ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ತಾಣಗಳ ರಕ್ಷಣೆಗೆ, ಸಂರಕ್ಷಣೆಗೆ, ಜೀರ್ಣೋದ್ಧಾರಕ್ಕೆ, ವಾರ್ಷಿಕ ನಿರ್ವಹಣೆಗೆ ಹಾಗೂ ಪ್ರವಾಸಿಗರಿಗೆ ಮೂಲ ಮತ್ತು ಆಧುನಿಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಅವುಗಳನ್ನು ದತ್ತು ತೆಗೆದುಕೊಳ್ಳುವುದಕ್ಕಾಗಿ 'ಸ್ಮಾರಕ ಮಿತ್ರರು' ಎಂಬ ಪಟ್ಟಿಯಲ್ಲಿ ಸೇರಲು ಅವರು ಅರ್ಹರಾಗಿರುತ್ತಾರೆ.][2]

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
(2) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**16. ಆರಾಧನಾ ಸ್ಥಳವನ್ನು ದುರುಪಯೋಗಪಡಿಸಿಕೊಳ್ಳುವುದು, ಮಲಿನಗೊಳಿಸುವುದು ಅಥವಾ ಅಪವಿತ್ರಗೊಳಿಸುವುದರಿಂದ ಸಂರಕ್ಷಣೆ.-** (1) ಆ ಅಧಿನಿಯಮದ ಮೇರೆಗೆ ಸರ್ಕಾರವು ಸುಸ್ಥಿತಿಯಲ್ಲಿಟ್ಟುಕೊಂಡು ಬಂದ ಆರಾಧನಾ ಸ್ಥಳ ಅಥವಾ ದೇವಾಲಯವಾಗಿರುವಂಥ ಸಂರಕ್ಷಿತ ಸ್ಮಾರಕವನ್ನು ಅದರ ಸ್ವರೂಪಕ್ಕೆ ಅಸಂಗತವಾದ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ.

(2) ಸರ್ಕಾರವು, 13ನೇ ಪ್ರಕರಣದ ಮೇರೆಗೆ ಸಂರಕ್ಷಿತ ಸ್ಮಾರಕವನ್ನು ಆರ್ಜಿಸಿರುವಲ್ಲಿ ಅಥವಾ [1][ಆಯುಕ್ತ][1]ನು 5ನೇ ಪ್ರಕರಣದ ಮೇರೆಗೆ ಸಂರಕ್ಷಿತ ಸ್ಮಾರಕವನ್ನು ಖರೀದಿಸಿರುವಲ್ಲಿ ಅಥವಾ ಗೇಣಿಗೆ ತೆಗೆದುಕೊಂಡಿರುವಲ್ಲಿ ಅಥವಾ ಅದನ್ನು ದಾನವಾಗಿ ಅಥವಾ ಮರಣ ಶಾಸನ ದಾನವಾಗಿ ಅಂಗೀಕರಿಸುವಲ್ಲಿ ಅಥವಾ ಅದರ ಪಾಲಕತ್ವವನ್ನು ವಹಿಸಿಕೊಂಡಿರುವಲ್ಲಿ ಮತ್ತು ಅಂಥ ಸ್ಮಾರಕ ಅಥವಾ ಅದರ ಯಾವುದೇ ಭಾಗವನ್ನು ಯಾವುದೇ ಸಮುದಾಯವು ಧಾರ್ಮಿಕ ಆರಾಧನೆ ಅಥವಾ ಆಚರಣೆಗಳಿಗಾಗಿ ಉಪಯೋಗಿಸುತ್ತಿರುವಲ್ಲಿ, ಡೆಪ್ಯುಟಿ ಕಮಿಷನರನು,-

(ಎ) ಯಾವ ಸಮುದಾಯವು, ಆ ಸ್ಮಾರಕವು ಅಥವಾ ಅದರ ಭಾಗವನ್ನು ಉಪಯೋಗಿಸುತ್ತಿರುವುದೋ ಆ ಸಮುದಾಯದ ಧಾರ್ಮಿಕ ಆಚರಣೆಗಳಿಂದ ಹಾಗೆ ಪ್ರವೇಶಿಸಲು ಹಕ್ಕುಳ್ಳವನಾಗಿರದಂಥ ಯಾವನೇ ವ್ಯಕ್ತಿಯು ಸದರಿ ಸ್ಮಾರಕ ಅಥವಾ ಅದರ ಭಾಗದ ಧಾರ್ಮಿಕ ಪ್ರಭಾರವನ್ನು ಹೊಂದಿರುವ ವ್ಯಕ್ತಿಗಳು ಯಾರಾದರೂ ಇದ್ದರೆ, ಅವರ ಸಹಮತಿಯಿಂದ ನಿಯಮಿಸಿದ ಷರತ್ತುಗಳಿಗನುಸಾರವಾಗಿ ಹೊರತು ಅದರಲ್ಲಿ ಪ್ರವೇಶಿಸುವುದನ್ನು ನಿಷೇಧಿಸುವ ಮೂಲಕ, ಅಥವಾ

(ಬಿ) ಅವನು ಈ ಬಗ್ಗೆ ಅವಶ್ಯವೆಂದು ಯೋಚಿಸಬಹುದಾದಂಥ ಇತರ ಕ್ರಮವನ್ನು ಕೈಗೊಳ್ಳುವ ಮೂಲಕ,

-ಅಂಥ ಸ್ಮಾರಕ ಅಥವಾ ಅದರ ಭಾಗವನ್ನು ಮಲಿನಗೊಳಿಸುವುದು ಅಥವಾ ಅಪವಿತ್ರಗೊಳಿಸುವುದರಿಂದ ಸಂರಕ್ಷಿಸಲು ಸೂಕ್ತ ಏರ್ಪಾಡನ್ನು ಮಾಡತಕ್ಕದ್ದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**17. ಸ್ಮಾರಕದಲ್ಲಿ ಸರ್ಕಾರಿ ಹಕ್ಕುಗಳನ್ನು ಬಿಟ್ಟುಕೊಡುವುದು.-** ಸರ್ಕಾರದ ಮಂಜೂರಾತಿಯೊಂದಿಗೆ [1][ಆಯುಕ್ತ][1]ನು,-

(ಎ) ಯಾವುದೇ ಮಾರಾಟ, ಗೇಣಿ, ದಾನ ಅಥವಾ ಮರಣ ಶಾಸನದ ಕಾರಣದಿಂದಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಸ್ಮಾರಕಕ್ಕೆ ಸಂಬಂಧಿಸಿದಂತೆ, [1][ಆಯುಕ್ತ][1]ನು ಹಕ್ಕುಗಳನ್ನು ಆರ್ಜನೆ ಮಾಡಿರುವಲ್ಲಿ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಹಕ್ಕುಗಳನ್ನು ಆರ್ಜಿಸಿರದಿದ್ದರೆ, ತತ್ಕಾಲದಲ್ಲಿ ಆ ಸ್ಮಾರಕದ ಒಡೆಯನಾಗಬಹುದಾಗಿದ್ದಂಥ ವ್ಯಕ್ತಿಗೆ ಹಾಗೆ ಆರ್ಜನೆ ಮಾಡಿದ ಹಕ್ಕುಗಳನ್ನು ಅವನು ಬಿಟ್ಟುಕೊಡಬಹುದು; ಅಥವಾ

(ಬಿ) ಈ ಅಧಿನಿಯಮದ ಮೇರೆಗೆ ಅವನು ಅಂಗೀಕರಿಸಿಕೊಂಡಿರುವಂಥ ಸ್ಮಾರಕದ ಯಾವುದೇ ಪಾಲಕತ್ವವನ್ನು ಬಿಟ್ಟು ಕೊಡಬಹುದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**18. ಸಂರಕ್ಷಿತ ಸ್ಮಾರಕಗಳಿಗೆ ಪ್ರವೇಶದ ಹಕ್ಕು.**- ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಸಾರ್ವಜನಿಕರು ಯಾವುದೇ ಸಂರಕ್ಷಿತ ಸ್ಮಾರಕಕ್ಕೆ ಪ್ರವೇಶಿಸುವ ಹಕ್ಕನ್ನು ಹೊಂದಿರತಕ್ಕದ್ದು.

**ಸಂರಕ್ಷಿತ ಪ್ರದೇಶಗಳು**

**19. ಪುರಾತತ್ವ ಸ್ಥಳ ಮತ್ತು ಅವಶೇಷಗಳನ್ನು ಸಂರಕ್ಷಿತ ಪ್ರದೇಶವಾಗಿರುವುದಾಗಿ ಘೋಷಿಸಲು ಸರ್ಕಾರದ ಅಧಿಕಾರ.**- (1) ಸರ್ಕಾರವು ಯಾವುದೇ, ಪುರಾತತ್ವ ಸ್ಥಳ ಮತ್ತು ಅವಶೇಷಗಳನ್ನು ಸಂರಕ್ಷಿತ ಪ್ರದೇಶ ಎಂದು ಘೋಷಿಸಬೇಕೆಂದು ಅಭಿಪ್ರಾಯಪಡುವಲ್ಲಿ, ಅದು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಪುರಾತತ್ವ ಸ್ಥಳ ಮತ್ತು ಅವಶೇಷಗಳನ್ನು ಸಂರಕ್ಷಿತ ಪ್ರದೇಶವಾಗಿರುವುದಾಗಿ ಘೋಷಿಸುವ ಅದರ ಉದ್ದೇಶದ ಬಗ್ಗೆ ಎರಡು ತಿಂಗಳುಗಳ ನೋಟೀಸನ್ನು ನೀಡಬಹುದು ಮತ್ತು ಅಂಥ ಪ್ರತಿಯೊಂದು ಅಧಿಸೂಚನೆಯ ಪ್ರತಿಯನ್ನು ಆ ಸ್ಥಳ ಮತ್ತು ಅವಶೇಷಗಳ ಹತ್ತಿರದ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸತಕ್ಕದ್ದು.

(2) ಅಂಥ ಪುರಾತತ್ವ ಸ್ಥಳ ಮತ್ತು ಅವಶೇಷಗಳಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಯಾವನೇ ವ್ಯಕ್ತಿಯು, ಆ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಎರಡು ತಿಂಗಳುಗಳೊಳಗೆ ಆ ಪುರಾತತ್ವ ಸ್ಥಳ ಮತ್ತು ಅವಶೇಷಗಳನ್ನು ಸಂರಕ್ಷಿತ ಪ್ರದೇಶವಾಗಿರುವುದಾಗಿ ಘೋಷಿಸುವುದಕ್ಕೆ ಆಕ್ಷೇಪಿಸಬಹುದು.

(3) ಸದರಿ ಎರಡು ತಿಂಗಳುಗಳ ಅವಧಿಯು ಮುಕ್ತಾಯವಾದ ಮೇಲೆ ಸರ್ಕಾರವು, ಅದು ಸ್ವೀಕರಿಸಿದ ಆಕ್ಷೇಪಣೆಗಳು ಯಾವುದಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ, ಸರ್ಕಾರಿ ರಾಜ್ಯ ಪತ್ರದಲ್ಲಿ, ಅಧಿಸೂಚನೆಯ ಮೂಲಕ ಆ ಪುರಾತತ್ವ ಸ್ಥಳ ಮತ್ತು ಅವಶೇಷಗಳು ಒಂದು ಸಂರಕ್ಷಿತ ಪ್ರದೇಶವಾಗಿರುವುದಾಗಿ ಘೋಷಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಪ್ರಕಟಿಸಲಾದ ಅಧಿಸೂಚನೆಯು, ಅದನ್ನು ಹಿಂತೆಗೆದುಕೊಂಡ ಹೊರತು ಮತ್ತು ಹಿಂತೆಗೆದುಕೊಳ್ಳುವವರೆಗೆ, ಅದು ಸಂಬಂಧಪಡುವಂಥ ಆ

ಪುರಾತತ್ವ ಸ್ಥಳ ಮತ್ತು ಅವಶೇಷಗಳು ಈ ಅಧಿನಿಯಮದ ಉದ್ದೇಶಗಳಿಗಾಗಿ ಸಂರಕ್ಷಿತ ಪ್ರದೇಶವಾಗಿದೆ ಎಂಬ ಸಂಗತಿಯ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

**20. ಸಂರಕ್ಷಿತ ಪ್ರದೇಶಗಳಲ್ಲಿ ಸ್ವತ್ತಿನ ಹಕ್ಕುಗಳನ್ನು ಅನುಭೋಗಿಸುವುದರ ಮೇಲೆ ಪರಿಬಂಧಗಳು.-** (1) ಸಂರಕ್ಷಿತ ಪ್ರದೇಶದ ಒಡೆಯ ಅಥವಾ ಅನುಭೋಗದಾರನೂ ಸೇರಿದಂತೆ ಯಾವನೇ ವ್ಯಕ್ತಿಯು, ಸರ್ಕಾರದ ಅನುಮತಿಯಿಲ್ಲದೆ, ಸಂರಕ್ಷಿತ ಪ್ರದೇಶಗಳೊಳಗೆ ಯಾವುದೇ ಕಟ್ಟಡವನ್ನು ನಿರ್ಮಿಸತಕ್ಕದ್ದಲ್ಲ, ಅಥವಾ ಅಂಥ ಪ್ರದೇಶದಲ್ಲಿ ಯಾವುದೇ ಗಣಿ ಕೆಲಸ, ಕಲ್ಲು ಗಣಿ ಕೆಲಸ, ಉತ್ಖನನ, ಆಸ್ಫೋಟ ಅಥವಾ ಅದೇ ಸ್ವರೂಪದ ಯಾವುದೇ ಕಾರ್ಯಾಚರಣೆ ಇವುಗಳನ್ನು ನಡೆಸತಕ್ಕದ್ದಲ್ಲ ಅಥವಾ ಅಂಥ ಪ್ರದೇಶವನ್ನು ಅಥವಾ ಅದರ ಯಾವುದೇ ಭಾಗವನ್ನು ಇತರ ಯಾವುದೇ ರೀತಿಯಲ್ಲಿ ಉಪಯೋಗಿಸತಕ್ಕದ್ದಲ್ಲ:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಸಾಗುವಳಿಯ ಉದ್ದೇಶಗಳಿಗಾಗಿ ಅಂಥ ಸಾಗುವಳಿಯು ಮೇಲ್ಭಾಗದಿಂದ ಒಂದು ಅಡಿಗಿಂತ ಹೆಚ್ಚು ಮಣ್ಣನ್ನು ಅಗೆಯುವುದನ್ನು ಒಳಗೊಳ್ಳದಿದ್ದರೆ, ಯಾವುದೇ ಅಂಥ ಪ್ರದೇಶ ಅಥವಾ ಅದರ ಭಾಗದ ಉಪಯೋಗವನ್ನು ನಿಷೇಧಿಸುವುದಾಗಿ ಭಾವಿಸತಕ್ಕದ್ದಲ್ಲ.

(2) ಸರ್ಕಾರವು, ಆದೇಶದ ಮೂಲಕ, (1)ನೇ ಉಪಪ್ರಕರಣದ ಉಪಬಂಧಗಳ ಉಲ್ಲಂಘನೆಯಲ್ಲಿ ಸಂರಕ್ಷಿತ ಪ್ರದೇಶದೊಳಗೆ ಯಾವನೇ ವ್ಯಕ್ತಿಯು ನಿರ್ಮಿಸಿದ ಯಾವುದೇ ಕಟ್ಟಡವನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ತೆಗೆದುಹಾಕತಕ್ಕದ್ದೆಂದು ನಿರ್ದೇಶಿಸಬಹುದು ಮತ್ತು ಆ ವ್ಯಕ್ತಿಯು ಆದೇಶವನ್ನು ಪಾಲಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ ಡೆಪ್ಯುಟಿ ಕಮೀಷನರನು ಆ ಕಟ್ಟಡವನ್ನು ತೆಗೆದು ಹಾಕುವಂತೆ ಮಾಡಬಹುದು, ಮತ್ತು ಅ ವ್ಯಕ್ತಿಯು, ಅಂಥ ತೆಗೆಯುವುದರ ಬಗ್ಗೆ ಖರ್ಚನ್ನು ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದು.

**21. ಸಂರಕ್ಷಿತ ಪ್ರದೇಶವನ್ನು ಆರ್ಜಿಸಲು ಅಧಿಕಾರ.-** ಸರ್ಕಾರವು ಯಾವುದೇ ಸಂರಕ್ಷಿತ ಪ್ರದೇಶವು ರಾಷ್ಟ್ರೀಯ ಹಿತಾಸಕ್ತಿ ಮತ್ತು ಮೌಲ್ಯದ ಪ್ರಾಚೀನ ಸ್ಮಾರಕ ಅಥವಾ ಪುರಾತನ ವಸ್ತುಗಳನ್ನು ಒಳಗೊಂಡಿದೆ ಎಂದು ಅಭಿಪ್ರಾಯಪಟ್ಟರೆ, ಭೂ ಆರ್ಜನಾ ಅಧಿನಿಯಮ, 1894ರ ಉಪಬಂಧಗಳ ಮೇರೆಗೆ ಆ ಅಧಿನಿಯಮದ ಅರ್ಥ ವ್ಯಾಪ್ತಿಯೊಳಗೆ ಆರ್ಜನೆಯು ಸಾರ್ವಜನಿಕ ಉದ್ದೇಶಕ್ಕಾಗಿ ಇದ್ದಿದ್ದರೆ ಹೇಗೋ ಹಾಗೆ ಅಂಥ ಪ್ರದೇಶವನ್ನು ಅದು ಆರ್ಜಿಸಬಹುದು.

## ಪುರಾತನ ವಸ್ತುಗಳ ಸಂರಕ್ಷಣೆ

**22. ಪುರಾತನ ವಸ್ತುಗಳ ಸ್ಥಳ ಬದಲಾಯಿಸುವಿಕೆಯನ್ನು ನಿಯಂತ್ರಿಸಲು ಸರ್ಕಾರದ ಅಧಿಕಾರ.-** (1) ಸರ್ಕಾರವು ಯಾವುವೇ ಪುರಾತನ ವಸ್ತುಗಳನ್ನು ಅಥವಾ ಯಾವುದೇ ವರ್ಗದ ಪುರಾತನ ವಸ್ತುಗಳನ್ನು ಸರ್ಕಾರದ ಮಂಜೂರಾತಿಯಿಲ್ಲದೆ ಅವುಗಳು ಇರುವ ಸ್ಥಳದಿಂದ ಬದಲಾಯಿಸಕೂಡದೆಂದು ಪರ್ಯಾಲೋಚಿಸಿದರೆ ಸರ್ಕಾರವು ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಂಥ ಯಾವುದೇ ಪುರಾತನ ವಸ್ತು ಅಥವಾ ಯಾವುದೇ ವರ್ಗದ ಅಂಥ ಪುರಾತನ ವಸ್ತುಗಳನ್ನು [1][ಆಯುಕ್ತ][1]ನು ಬರಹದಲ್ಲಿನ ಅನುಮತಿಯೊಂದಿಗೆ ಹೊರತು ಸ್ಥಳ ಬದಲಾಯಿಸತಕ್ಕದ್ದಲ್ಲವೆಂದು ನಿರ್ದೇಶಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಅನುಮತಿಗಾಗಿನ ಪ್ರತಿಯೊಂದು ಅರ್ಜಿಯು ನಿಯಮಿಸಬಹುದಾದಂಥ ನಮೂನೆಯಲ್ಲಿ ಇರತಕ್ಕದ್ದು ಮತ್ತು ಅಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

(3) ಅನುಮತಿಯನ್ನು ನಿರಾಕರಿಸುವ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಸರ್ಕಾರಕ್ಕೆ ಅಪೀಲು ಮಾಡಿಕೊಳ್ಳಬಹುದು. ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**23. ಸರ್ಕಾರದಿಂದ ಪುರಾತನ ವಸ್ತುಗಳ ಖರೀದಿ.-** (1) ಸರ್ಕಾರವು, 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಮೂದಿಸಿದ ಯಾವುದೇ ಪುರಾತನ ವಸ್ತುವು ನಾಶವಾಗುವ, ತೆಗೆದು ಹಾಕುವ, ಹಾನಿಗೊಳಗಾಗುವ, ದುರುಪಯೋಗವಾಗುವ ಅಥವಾ ಕ್ಷೀಣವಾಗುವ ಅವಕಾಶವಿರುವ ಅಪಾಯವಿದೆ ಎಂದು, ಸರ್ಕಾರವು ಶಂಕಿಸಿದರೆ ಅಥವಾ ಅದರ ಐತಿಹಾಸಿಕ ಅಥವಾ ಪುರಾತನ ಮಹತ್ವದ ಕಾರಣದಿಂದಾಗಿ ಅಂಥ ಪುರಾತನ ವಸ್ತುವನ್ನು ಸಾರ್ವಜನಿಕ ಸ್ಥಳದಲ್ಲಿ ಸಂರಕ್ಷಿಸುವುದು ಅಪೇಕ್ಷಣಿಯವೆಂದು, ಅಭಿಪ್ರಾಯಪಟ್ಟರೆ, ಸರ್ಕಾರವು ಅಂಥ ಪುರಾತನ ವಸ್ತುವನ್ನು ಅದರ ಮಾರುಕಟ್ಟೆ ಬೆಲೆಯಲ್ಲಿ ಕಡ್ಡಾಯವಾಗಿ ಖರೀದಿಸುವುದಕ್ಕಾಗಿ ಆದೇಶವನ್ನು ಮಾಡಬಹುದು ಮತ್ತು ಆ ತರುವಾಯ, ಡೆಪ್ಯುಟಿ ಕಮೀಷನರನು ಖರೀದಿಸಬೇಕಾದ ಪುರಾತನ ವಸ್ತುವಿನ ಒಡೆಯನಿಗೆ ನೋಟೀಸನ್ನು ಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಪುರಾತನ ವಸ್ತುವಿಗೆ ಸಂಬಂಧಿಸಿದಂತೆ ಕಡ್ಡಾಯ ಖರೀದಿಯ ನೋಟೀಸನ್ನು ಹೊರಡಿಸಿರುವಲ್ಲಿ, ಅಂಥ ಪುರಾತನ ವಸ್ತುವು ಆ ನೋಟೀಸಿನ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು.

(3) ಈ ಪ್ರಕರಣದ ಮೂಲಕ ನೀಡಲಾದ ಕಡ್ಡಾಯ ಖರೀದಿಯ ಅಧಿಕಾರವು ಪ್ರಾಮಾಣಿಕ ಧಾರ್ಮಿಕ ಆಚರಣೆಗಳಿಗಾಗಿ ವಾಸ್ತವವಾಗಿ ಉಪಯೋಗಿಸಿದ ಯಾವುದೇ ಪ್ರತಿಮೆ ಅಥವಾ ಪ್ರತೀಕಕ್ಕೆ ವ್ಯಾಪ್ತವಾಗತಕ್ಕದ್ದಲ್ಲ.

## ಪರಿಹಾರದ ತತ್ವಗಳು

**24. ನಷ್ಟ ಅಥವಾ ಹಾನಿಗಾಗಿ ನಷ್ಟ ಪರಿಹಾರ**.- ಭೂಮಿಯ ಯಾವ ಒಡೆಯನಿಗೆ ಅಥವಾ ಅಧಿಭೋಗದಾರನಿಗೆ ಅಂಥ ಭೂಮಿಯ ಮೇಲೆ ಯಾವುದೇ ಪ್ರದೇಶದ ಅಥವಾ ಅದರಲ್ಲಿನ ಉತ್ಖನನಗಳ ಕಾರಣದಿಂದಾಗಿ ಈ ಅಧಿನಿಯಮದ ಮೂಲಕ ಪ್ರದಾನ ಮಾಡಿದ ಯಾವುದೇ ಇತರ ಅಧಿಕಾರದ ಚಲಾವಣೆಯ ಕಾರಣದಿಂದಾಗಿ ಯಾವುದೇ ನಷ್ಟ ಅಥವಾ ಹಾನಿ ಅಥವಾ ಆ ಭೂಮಿಯಿಂದ ಬರುವ ಲಾಭಗಳ ಯಾವುದೇ ಉಳಿತಾಯ ಉಂಟಾಗಿದೆಯೋ ಆ ಯಾವನೇ ಒಡೆಯ ಅಥವಾ ಅಧಿಭೋಗದಾರನಿಗೆ ಸರ್ಕಾರವು ಅಂಥ ನಷ್ಟ, ಹಾನಿ ಅಥವಾ ಲಾಭಗಳ ಉಳಿತಾಯಕ್ಕಾಗಿ ನಷ್ಟ ಪರಿಹಾರವನ್ನು ಸಂದಾಯ ಮಾಡತಕ್ಕದ್ದು.

**25. ಮಾರುಕಟ್ಟೆ ಮೌಲ್ಯ ಅಥವಾ ನಷ್ಟ ಪರಿಹಾರದ ನಿರ್ಧರಣೆ.-** (1) ಈ ಅಧಿನಿಯಮದ ಮೇರೆಗೆ ಮಾರುಕಟ್ಟೆ ಮೌಲ್ಯದಲ್ಲಿ ಯಾವ ಸ್ವತ್ತನ್ನು ಖರೀದಿಸಲು ಸರ್ಕಾರವನ್ನು ಅಧಿಕೃತಗೊಳಿಸಲಾಗಿದೆಯೋ ಆ ಸ್ವತ್ತಿನ ಅಂಥ ಮಾರುಕಟ್ಟೆ ಮೌಲ್ಯ ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರವು ಸಂದಾಯ ಮಾಡಬೇಕಾದ ನಷ್ಟ

ಪರಿಹಾರವನ್ನು, ಅಂಥ ಮಾರುಕಟ್ಟೆ ಮೌಲ್ಯ ಅಥವಾ ನಷ್ಟ ಪರಿಹಾರಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದವು ಉದ್ಭವಿಸುವಲ್ಲಿ, ಭೂ ಆರ್ಜನಾ ಅಧಿನಿಯಮ, 1894ರ 3, 5, 8ರಿಂದ 34, 45, 46, 47, 51 ಮತ್ತು 52ನೇ ಪ್ರಕರಣಗಳಲ್ಲಿ ಅವುಗಳನ್ನು ಅನ್ವಯಗೊಳಿಸಲು ಸಾಧ್ಯವಾಗಬಹುದಾದ ಮಟ್ಟಿಗೆ ಉಪಬಂಧಿಸಿದ ರೀತಿಯಲ್ಲಿ ನಿಶ್ಚಿತಪಡಿಸಿಕೊಳ್ಳತಕ್ಕದ್ದು:

ಪರಂತು, ಸದರಿ ಭೂ ಆರ್ಜನಾ ಅಧಿನಿಯಮದ ಮೇರೆಗೆ ವಿಚಾರಣೆಯನ್ನು ನಡೆಸುವಾಗ, ಡೆಪ್ಯುಟಿ ಕಮೀಷನರರನು ಇಬ್ಬರು ನಿರ್ಧಾರಕರಿಂದ ಸಹಾಯವನ್ನು ಪಡೆಯತಕ್ಕದ್ದು; ಅವನಲ್ಲಿ ಒಬ್ಬನು ಸರ್ಕಾರದಿಂದ ನಾಮನಿರ್ದೇಶಿತನಾಗಿರುವ ಸಕ್ಷಮ ವ್ಯಕ್ತಿಯಾಗಿರತಕ್ಕದ್ದು ಮತ್ತು ಇನ್ನೊಬ್ಬನು ಒಡೆಯನಿಂದ ನಾಮನಿರ್ದೇಶಿತ ವ್ಯಕ್ತಿಯಾಗಿರತಕ್ಕದ್ದು ಅಥವಾ ಡೆಪ್ಯುಟಿ ಕಮೀಷನರರನು ಈ ಬಗ್ಗೆ ನಿಗದಿಪಡಿಸಬಹುದಾದಂಥ ಸೂಕ್ತ ಕಾಲದೊಳಗೆ ಒಡೆಯನು ನಿರ್ಧಾರಕನನ್ನು ನಾಮನಿರ್ದೇಶಿಸಲು ತಪ್ಪಿದ ಸಂದರ್ಭದಲ್ಲಿ ಡೆಪ್ಯುಟಿ ಕಮೀಷನರರನಿಂದ ನಾಮನಿರ್ದೇಶಿತನಾದ ವ್ಯಕ್ತಿಯಾಗಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಅಥವಾ ಭೂ ಆರ್ಜನಾ ಅಧಿನಿಯಮ, 1894ರಲ್ಲಿ ಏನೇ ಅಡಕವಾಗಿದ್ದಾಗ್ಯೂ, 23ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ಪುರಾತನ ವಸ್ತುವಿಗೆ ಸಂಬಂಧಿಸಿದಂತೆ ಕಡ್ಡಾಯ ಖರೀದಿಯ ಆದೇಶವನ್ನು ಮಾಡಲಾಗಿದೆಯೋ ಆ ಯಾವುದೇ ಪುರಾತನ ವಸ್ತುವಿನ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವಲ್ಲಿ ಅದು ಐತಿಹಾಸಿಕ ಅಥವಾ ಪುರಾತತ್ವ ಮಹತ್ವದ್ದಾಗಿರುವ ಕಾರಣದಿಂದಾಗಿ ಆ ಪುರಾತನ ವಸ್ತುವಿನ ಮೌಲ್ಯದಲ್ಲಿ ಯಾವುದೇ ಹೆಚ್ಚಳವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕದ್ದಲ್ಲ.

## ಸಂಕೀರ್ಣ

**26. ದಂಡಗಳು.-**

(1) (i) ಸಂರಕ್ಷಿತ ಸ್ಮಾರಕವನ್ನು ನಾಶಪಡಿಸುವ, ತೆಗೆದುಹಾಕುವ, ಹಾನಿಗೊಳಿಸುವ, ಬದಲಾಯಿಸುವ, ವಿರೂಪಗೊಳಿಸುವ, ಗಂಡಾಂತರಕ್ಕೀಡುಮಾಡುವ ಅಥವಾ ದುರುಪಯೋಗಪಡಿಸುವ; ಅಥವಾ

(ii) ಸಂರಕ್ಷಿತ ಸ್ಮಾರಕದ ಒಡೆಯ ಅಥವಾ ಅಧಿಭೋಗದಾರನಾಗಿದ್ದು 9ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಥವಾ 10ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಉಲ್ಲಂಘಿಸುವ; ಅಥವಾ

(iii) ಸಂರಕ್ಷಿತ ಸ್ಮಾರಕದಿಂದ ಯಾವುದೇ ಶಿಲ್ಪ, ಕೆತ್ತನೆ, ಪ್ರತಿಮೆ, ಅರೆಯುಬ್ಬುಚಿತ್ರ, ಶಾಸನ ಅಥವಾ ಇತರ ಅಂತಹುದೇ ವಸ್ತುವನ್ನು ಸ್ಥಾನಪಲ್ಲಟಗೊಳಿಸುವ; ಅಥವಾ

(iv) 20ನೇ ಪ್ರಕರಣದ (1)ನೇ ಉಪಪ್ರಕರಣವನ್ನು ಉಲ್ಲಂಘಿಸಿ ಯಾವುದೇ ಕಾರ್ಯವನ್ನು ಮಾಡುವ

- ಯಾವನೇ ಆಗಲಿ, [1][ಎರಡು ವರ್ಷಗಳವರೆಗೆ][1] ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ [1][ಒಂದು ಲಕ್ಷ ರೂಪಾಯಿಗಳಿಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಉಲ್ಲಂಘಿಸಿ ಯಾವುದೇ ಪುರಾತನ ವಸ್ತುವನ್ನು ಸ್ಥಳ ಬದಲಾಯಿಸುವ ಯಾವನೇ ವ್ಯಕ್ತಿಯು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಐದು ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು ಮತ್ತು ಯಾವುದೇ ಅಂಥ ಉಲ್ಲಂಘನೆಯ ಬಗ್ಗೆ ವ್ಯಕ್ತಿಯನ್ನು ಅಪರಾಧಿಯೆಂದು ನಿರ್ಣಯಿಸುವ ನ್ಯಾಯಾಲಯವು ಆದೇಶದ ಮೂಲಕ ಅಂಥ ಪುರಾತನ ವಸ್ತುವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದೆಂದು ನಿರ್ದೇಶಿಸಬಹುದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**27. ಅಪರಾಧಗಳ ಅಧಿವಿಚಾರಣೆ ಮಾಡಲು ಅಧಿಕಾರವ್ಯಾಪ್ತಿ.-** ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕೆಳ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದಲ್ಲ.

**28. ಕೆಲವು ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು.-** ದಂಡ ಪ್ರಕ್ರಿಯಾ ಸಂಹಿತೆ, 1898ರಲ್ಲಿ (ಕೇಂದ್ರ ಅಧಿನಿಯಮ 1898ರ ಸಂಖ್ಯೆ V) ಏನೇ ಅಡಕವಾಗಿದ್ದಾಗ್ಯೂ 26ನೇ ಪ್ರಕರಣದ (i)ನೇ ಖಂಡ ಅಥವಾ (iii)ನೇ ಖಂಡದ ಮೇರೆಗಿನ ಅಪರಾಧವನ್ನು ಆ ಸಂಹಿತೆಯ ಅರ್ಥವ್ಯಾಪ್ತಿಯೊಳಗೆ ಸಂಜ್ಞೇಯ ಅಪರಾಧವೆಂದು ಭಾವಿಸತಕ್ಕದ್ದು.

**29. ಸರ್ಕಾರಕ್ಕೆ ಬರಬೇಕಾದ ಮೊಬಲಗುಗಳನ್ನು ವಸೂಲು ಮಾಡುವುದು.**_ ಈ ಅಧಿನಿಯಮದ ಮೇರೆಗೆ ಯಾವನೇ ವ್ಯಕ್ತಿಯಿಂದ ಸರ್ಕಾರಕ್ಕೆ ಬರಬೇಕಾದ ಯಾವುದೇ ಮೊಬಲಗನ್ನು, [1][ಆಯುಕ್ತ][1]ನು ಕೊಟ್ಟ ಪ್ರಮಾಣಪತ್ರದ ಮೇಲೆ ಭೂಕಂದಾಯದ ಬಾಕಿಯಂತೆ ಅದೇ ರೀತಿಯಲ್ಲಿ ವಸೂಲು ಮಾಡಬಹುದು.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**30. ಅಧಿನಿಯಮದ ಮೇರೆಗೆ ಕೈಗೊಳ್ಳಲಾದ ಕ್ರಮದ ರಕ್ಷಣೆ.-** ಈ ಅಧಿನಿಯಮದಿಂದ ಪ್ರದತ್ತವಾದ ಯಾವುದೇ ಅಧಿಕಾರದ ಚಲಾವಣೆಯಲ್ಲಿ ಮಾಡಿದ ಅಥವಾ ಸದ್ಭಾವನೆಯಿಂದ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವನೇ ಲೋಕ ನೌಕರನ ವಿರುದ್ಧ ನಷ್ಟ ಪರಿಹಾರಕ್ಕಾಗಿನ ಯಾವುದೇ ದಾವೆ ಮತ್ತು ಯಾವುದೇ ಕ್ರಿಮಿನಲ್ ವ್ಯವಹರಣೆಯು ಇರತಕ್ಕದ್ದಲ್ಲ.

**31. ನಿಯಮಗಳ ರಚನಾಧಿಕಾರ.-** (1) ಸರ್ಕಾರವು, ಸರ್ಕಾರಿ ರಾಜ್ಯ ಪತ್ರದಲ್ಲಿ ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಈ ಅಧಿನಿಯದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು, ಎಂದರೆ:-

(ಎ) ಸಂರಕ್ಷಿತ ಸ್ಮಾರಕದ ಹತ್ತಿರ ಗಣಿ ಕೆಲಸ, ಕಲ್ಲು ಗಣಿ ಕೆಲಸ, ಉತ್ಖನನ, ಆಸ್ಫೋಟನ ಅಥವಾ ಅಂಥದೇ ಸ್ವರೂಪದ ಯಾವುದೇ ಕಾರ್ಯಾಚರಣೆಯನ್ನು ನಿಷೇಧಿಸುವುದು ಅಥವಾ ಲೈಸನ್ಸ್

ಕೊಡುವ ಮೂಲಕ ಅಥವಾ ಅನ್ಯಥಾ ವಿನಿಯಮಿಸುವುದು ಅಥವಾ ಅಂಥ ಸ್ಮಾರಕಕ್ಕೆ ಹೊಂದಿಕೊಂಡಿರುವ ಭೂಮಿಯ ಮೇಲೆ ಕಟ್ಟಡಗಳ ನಿರ್ಮಾಣ ಮತ್ತು ಅನಧಿಕೃತ ಕಟ್ಟಡಗಳನ್ನು ತೆಗೆದು ಹಾಕುವುದು;

(ಬಿ) ಸಂರಕ್ಷಿತ ಸ್ಮಾರಕಕ್ಕೆ ಸಾರ್ವಜನಿಕರಿಗೆ ಪ್ರವೇಶದ ಹಕ್ಕು ಮತ್ತು ಅದಕ್ಕಾಗಿ ವಿಧಿಸಬೇಕಾದ ಫೀಜು ಯಾವುದಾದರೂ ಇದ್ದರೆ, ಅದು;

(ಸಿ) 20ನೇ ಪ್ರಕರಣ ಅಥವಾ 22ನೇ ಪ್ರಕರಣದ ಮೇರೆಗೆ ಅನುಮತಿಗಾಗಿ ಮಾಡಿಕೊಳ್ಳಬಹುದಾದ ಅರ್ಜಿಗಳ ನಮೂನೆ ಮತ್ತು ಅವುಗಳು ಒಳಗೊಂಡಿರಬೇಕಾದ ವಿವರಗಳು;

(ಡಿ) ಈ ಅಧಿನಿಯಮದ ಮೇರೆಗೆ ಅಪೀಲುಗಳನ್ನು ಸಲ್ಲಿಸುವ ನಮೂನೆ ಮತ್ತು ರೀತಿ ಮತ್ತು ಅವುಗಳನ್ನು ಯಾವ ಕಾಲದೊಳಗೆ ಸಲ್ಲಿಸಬಹುದೋ ಆ ಕಾಲ;

(ಇ) ಈ ಅಧಿನಿಯಮದ ಮೇರೆಗೆ ಯಾವುದೇ ಆದೇಶ ಅಥವಾ ನೋಟೀಸಿನ ಜಾರಿಯ ರೀತಿ;

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಪ್ರಕರಣದ ಮೇರೆಗೆ ಯಾವುದೇ ನಿಯಮವು, ಅದರ ಉಲ್ಲಂಘನೆಯು,-

(i) (2)ನೇ ಉಪಪ್ರಕರಣದ (ಎ) ಖಂಡಕ್ಕೆ ಸಂಬಂಧಿಸಿ ರಚಿಸಿದ ನಿಯಮದ ಸಂದರ್ಭದಲ್ಲಿ, [1][ಎರಡು ವರ್ಷಗಳವರೆಗೆ][1] ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ [1][ಒಂದು ಲಕ್ಷ ರೂಪಾಯಿಗಳಿಗೆ] [1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ;

(ii) (2)ನೇ ಉಪಪ್ರಕರಣದ (ಬಿ) ಖಂಡಕ್ಕೆ ಸಂಬಂಧಿಸಿ ರಚಿಸಿದ ನಿಯಮದ ಸಂದರ್ಭದಲ್ಲಿ [1][ಒಂದು ಲಕ್ಷ ರೂಪಾಯಿಗಳಿಗೆ][1] ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ-ದಂಡನೀಯವಾಗತಕ್ಕುದೆಂದು ಉಪಬಂಧಿಸಬಹುದು.

(4) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು; ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(1) 2024ರ ಅಧಿನಿಮಯ ಸಂಖ್ಯೆ: 35 ರ ಮೂಲಕ ದಿ:12.08.2024ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**32. ನಿರಸನ ಮತ್ತು ಉಳಿಸುವಿಕೆಗಳು.-** ಪ್ರಾಚೀನ ಸ್ಮಾರಕಗಳ ಪರಿರಕ್ಷಣಾ ಅಧಿನಿಯಮ, 1904 (ಕೇಂದ್ರ ಅಧಿನಿಯಮ 1904ರ VII), ಅದು ಸಂವಿಧಾನದ ಏಳನೇ ಅನುಸೂಚಿಯ IIನೆಯ ಪಟ್ಟಿಯ 12ನೇ ನಮೂದಿನೊಳಗೆ ಬರುವ ವಿಷಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಹೈದರಾಬಾದು ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಪ್ರಾಚೀನ ಸ್ಮಾರಕಗಳ ಪರಿರಕ್ಷಣಾ ಅಧಿನಿಯಮ, 1337 ಫಾಸ್ಲಿ (ಹೈದರಾಬಾದು ಅಧಿನಿಯಮ 1337 ಫಾಸ್ಲಿಯ VIII, ಮೈಸೂರು ಪ್ರದೇಶದಲ್ಲಿ ಜಾರಿಯಲ್ಲಿದ್ದಂತೆ ಮೈಸೂರು ಪ್ರಾಚೀನ ಸ್ಮಾರಕಗಳ ಪರಿರಕ್ಷಣಾ ಅಧಿನಿಯಮ, 1925 (ಮೈಸೂರು ಅಧಿನಿಯಮ 1925ರ IX) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ:

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899 ([1][ಕರ್ನಾಟಕ][1] ಅಧಿನಿಯಮ 1898ರ III)ದ 6ನೇ ಪ್ರಕರಣದ ಉಪಬಂಧಗಳು ಸದರಿ ಅಧಿನಿಯಮಿತಿಗಳ ನಿರಸನಕ್ಕೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮದ 24ನೇ ಪ್ರಕರಣವು, ಸದರಿ ಅಧಿನಿಯಮಿತಿಗಳನ್ನು ಈ ಅಧಿನಿಯಮದ ಮೂಲಕ ನಿರಸನಗೊಳಿಸಿ, ಪುನರ್ ಅಧಿನಿಯಮಿತಿಗೊಳಿಸಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ 1973ರ ಮೂಲಕ 01.11.1973ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

**33. ಅಧಿನಿಯಮವು ಕೇಂದ್ರ ಅಧಿನಿಯಮ 1958ರ 24ರ ಜೊತೆಗೆ ಇರತಕ್ಕದ್ದು ಆದರೆ ಅದನ್ನು ಅಲ್ಪೀಕರಿಸಿ ಅಲ್ಲ.-** ಈ ಅಧಿನಿಯಮದ ಉಪಬಂಧಗಳು, ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1958 ಇದರ ಉಪಬಂಧಗಳ ಜೊತೆಗಿರತಕ್ಕದ್ದು. ಆದರೆ ಅವುಗಳನ್ನು ಅಲ್ಪೀಕರಿಸಿ ಅಲ್ಲ.

**********

**ಅಧಿಸೂಚನೆ.**

**ಬೆಂಗಳೂರು, ದಿನಾಂಕ 8ನೇ ಆಗಸ್ಟ್ 1966 (ಸಂಖ್ಯೆ ಇಡಿ 16 ಎಸ್‌ಎಆರ್ 64)**

ಮೈಸೂರು ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ ಸಂಖ್ಯೆ 7) 1ನೇ ಪ್ರಕರಣದ (3)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಮೈಸೂರು ಸರ್ಕಾರವು 1966ರ ಆಗಸ್ಟ್ 15ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂಬುದಾಗಿ ಈ ಮೂಲಕ ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

ಬಿ.ಆರ್. ವರ್ಮ,
ಕಾರ್ಯದರ್ಶಿ,

(ಕರ್ನಾಟಕ ವಿಶೇಷ ರಾಜ್ಯಪತ್ರ ಭಾಗ IV-2-ಸಿ (ii), ದಿನಾಂಕ 25ನೇ ಆಗಸ್ಟ್ 1966, ಪುಟ 3045ರಲ್ಲಿ ಪ್ರಕಟಿಸಲಾಗಿದೆ.)

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಕ್ರಮಾಂಕ ಲಾ 11 ಎಲ್‌ಎಂಪಿ 92 ದಿನಾಂಕ 10ನೇ ಏಪ್ರಿಲ್ 1992**

ಕರ್ನಾಟಕ ರಾಜ್ಯಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ 26)ರ 5-ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲನಾದ ಶ್ರೀ ಖುರ್ಷಿದ್ ಆಲಂ ಖಾನ್ ಎಂಬ ನಾನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1961 ಮತ್ತು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ನಿಯಮಗಳು, 1965ರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕುದೆಂದು ಈ ಮೂಲಕ ನಿರ್ದಿಷ್ಟಪಟಿಸುತ್ತೇನೆ.

ಕರ್ನಾಟಕ ರಾಜ್ಯಪಾಲರು

## 2024 ರ ಕರ್ನಾಟಕ ಅಧಿನಿಯಮ ಸಂಖ್ಯೆ: 35

(2024 ರ ಆಗಸ್ಟ್ ತಿಂಗಳ 12ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ (ತಿದ್ದುಪಡಿ) ಅಧಿನಿಯಮ, 2024

(2024 ರ ಆಗಸ್ಟ್ ತಿಂಗಳ 8ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1961ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 7)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ (ತಿದ್ದುಪಡಿ) ಅಧಿನಿಯಮ, 2024 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು;

**2. ಪದಾವಳಿಗಳ ಪ್ರತಿಯೋಜನೆ.-** ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳ ಮತ್ತು ಅವಶೇಷಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 7)ರಲ್ಲಿ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) "ನಿರ್ದೇಶಕ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ "ಆಯುಕ್ತ" ಎಂಬ ಪದಗಳನ್ನು ಪ್ರತ್ಯಯಗಳೊಂದಿಗೆ ಪ್ರತಿಯೋಜಿಸತಕ್ಕದ್ದು.

**3. ಪ್ರಕರಣ 15ರ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ,-

(i) ಪ್ರಸ್ತುತವಿರುವ ಖಂಡವನ್ನು (1)ನೇ ಖಂಡವೆಂದು ಸಂಖ್ಯೆಯನ್ನು ನೀಡತಕ್ಕದ್ದು; ಮತ್ತು

(ii) ಹಾಗೆ ಸಂಖ್ಯೆಯನ್ನು ನೀಡಲಾದ (1)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ಸ್ಮಾರಕವನ್ನು ದತ್ತು ತೆಗೆದುಕೊಳ್ಳುವ ಯೋಜನೆಯಡಿಯಲ್ಲಿ ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿಗಳು ಅಥವಾ ರೂಪಿಸಿರುವ ಷರತ್ತುಗಳು ಮತ್ತು ನಿಬಂಧನೆಗಳ ಅನುಸಾರ, ಕಂಪನಿ ಅಥವಾ ಫರ್ಮ್ ಅಥವಾ ಸೀಮಿತ ಹೊಣೆಗಾರಿಕೆ ಸಹಭಾಗಿತ್ವ (LLP) ಸಂಸ್ಥೆ, ಪಾಲುದಾರಿಕೆ ಫರ್ಮ್, ಆಸಕ್ತಿಯುಳ್ಳ ಸೊಸೈಟಿಗಳು ಅಥವಾ ಸಹಕಾರ ಸಂಘಗಳು, ಟ್ರಸ್ಟ್‌ಗಳು ಅಥವಾ ಸರ್ಕಾರೇತರ ಸಂಸ್ಥೆಗಳು ಅಥವಾ ಆಸಕ್ತಿಯುಳ್ಳ ವ್ಯಕ್ತಿಗಳು, ಅವರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (CSR) ಕಾರ್ಯಕ್ರಮಗಳ ಅಡಿಯಲ್ಲಿ ಕರ್ನಾಟಕದಾದ್ಯಂತವಿರುವ ಪ್ರಾಚೀನ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳು, ಪಾರಂಪರಿಕ ಕಟ್ಟಡಗಳು ಮತ್ತು ಪಾರಂಪರಿಕ ತಾಣಗಳ ರಕ್ಷಣೆಗೆ, ಸಂರಕ್ಷಣೆಗೆ, ಜೀರ್ಣೋದ್ಧಾರಕ್ಕೆ, ವಾರ್ಷಿಕ ನಿರ್ವಹಣೆಗೆ ಹಾಗೂ ಪ್ರವಾಸಿಗರಿಗೆ ಮೂಲ ಮತ್ತು ಆಧುನಿಕ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಅವುಗಳನ್ನು ದತ್ತು ತೆಗೆದುಕೊಳ್ಳುವುದಕ್ಕಾಗಿ 'ಸ್ಮಾರಕ ಮಿತ್ರರು' ಎಂಬ ಪಟ್ಟಿಯಲ್ಲಿ ಸೇರಲು ಅವರು ಅರ್ಹರಾಗಿರುತ್ತಾರೆ."

**4. ಪ್ರಕರಣ 26ರ ತಿದ್ದುಪಡಿ.-** ಮೂಲ ಅಧಿನಿಯಮದ 26ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (iv)ನೇ ಖಂಡದಲ್ಲಿ "ಮೂರು ತಿಂಗಳುಗಳಿಗೆ" ಎಂಬ ಪದಗಳ ಬದಲಿಗೆ "ಎರಡು ವರ್ಷಗಳವರೆಗೆ" ಹಾಗೂ "ಎರಡು ಸಾವಿರ ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಒಂದು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. ಪ್ರಕರಣ 31ರ ತಿದ್ದುಪಡಿ.-** ಮೂಲ ಅಧಿನಿಯಮದ 31ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಖಂಡ (i)ರಲ್ಲಿನ "ಮೂರು ತಿಂಗಳುಗಳಿಗೆ" ಎಂಬ ಪದಗಳ ಬದಲಿಗೆ "ಎರಡು ವರ್ಷಗಳವರೆಗೆ" ಎಂಬ ಪದಗಳನ್ನು ಹಾಗೂ "ಎರಡು ಸಾವಿರ ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಒಂದು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) ಖಂಡ (ii)ರಲ್ಲಿನ "ಐದು ನೂರು ರೂಪಾಯಿಗಳಿಗೆ" ಎಂಬ ಪದಗಳ ಬದಲಿಗೆ "ಒಂದು ಲಕ್ಷ ರೂಪಾಯಿಗಳಿಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

The above translation of the Karnataka Ancient and Historical Monuments and Archeological Sites and Remains (Amendment) Act, 2024 (Karnataka Act No. 35 of 2024) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No. 13 of 2023).

**ಥಾವರ್‌ಚಂದ್ ಗೆಹ್ಲೋಟ್**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಜಿ. ಶ್ರೀಧರ್)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.